ANANTHKUMAR PRATISHTHANA

# ಅನಂತಪಥ

ಪುಟ 8

ವ್ಯಕ್ತಿ ವಿಶೇಷ ಮಾಲಿಕೆ

ಸದ್ಗುರು ಗಣಪತರಾವ್ ಮಹಾರಾಜರು



ಸಂಪುಟ - 5 ಏಪ್ರಿಲ್ - 2025 ಸಂಚಿಕೆ - 58

## ರಾಜಕಾರಣದ ಸವ್ಯಸಾಚಿ ಅನಂತ

**-ವಿಶ್ವೇಶ್ವರ್ ಭಟ್, ಸಂಪಾದಕರು, ವಿಶ್ವವಾಣಿ**

ಕಳೆದ ಮೂರೂವರೆ ದಶಕಗಳ ರಾಜಕೀಯ ಜೀವನದಲ್ಲಿ ಅನಂತಕುಮಾರ ತಮ್ಮನ್ನು ಸ್ವಯಂ ರೂಪಿಸಿಕೊಂಡ ರೀತಿ ಅನನ್ಯವಾದುದು. ರಾಜಕೀಯದ ಏಣಿಗಳನ್ನು ಸುಲಭವಾಗಿ ಏರಲು ನೆರವಾಗುವ 'ಜಾತಿ' ಎಂಬ ಮೆಟ್ಟಿಲು ಅವರಿಗೆ ಇರಲಿಲ್ಲ. ಬ್ರಾಹ್ಮಣ ಎಂಬ ಕಾರಣವೇ ಅವರಿಗೆ ಅಡ್ಡಿಯಾಯಿತು. ಆದರೆ ಸಾಮಾನ್ಯ ರೈಲ್ವೆ ನೌಕರನ ಮಗ ಆರು ಬಾರಿ ಸತತವಾಗಿ ಲೋಕಸಭಾ ಸದಸ್ಯರಾಗಿ, ಸುಮಾರು ಹನ್ನೆರಡು ವರ್ಷಗಳ ಕಾಲ ಮಂತ್ರಿಯಾಗಿ, ಪ್ರಧಾನಿಯವರ ಆಪ್ತ ವಲಯದಲ್ಲಿ ವಿಶ್ವಾಸಾರ್ಹ ವ್ಯಕ್ತಿಯಾಗಿ ಬೆಳೆದದ್ದು ಅವರ ಬುದ್ಧಿವಂತಿಕೆ, ಅರ್ಹತೆ, ಯೋಗ್ಯತೆ ಮತ್ತು ಚಾಕಚಕ್ಯತೆಗಳಿಂದಲೇ. ಅವರು ಒಕ್ಕಲಿಗರೋ, ಲಿಂಗಾಯತರೋ, ಕುರುಬರೋ ಆಗಿದ್ದಿದ್ದರೆ ಎಂದೋ ಕರ್ನಾಟಕದ ಮುಖ್ಯಮಂತ್ರಿ ಆಗಿರುತ್ತಿದ್ದರು.

ಅನಂತಕುಮಾರ ಅವರಿಗೆ ಅನುಭವ, ಸಾಮರ್ಥ್ಯ ಮತ್ತು ಹಿರಿತನವಿದ್ದರೂ, ಕೇವಲ ಜಾತಿಯ ಕಾರಣದಿಂದ ಆ ಸ್ಥಾನ ಬೇರೆಯವರ ಪಾಲಾಗಿದ್ದು ಅವರಿಗೆ ಆದ ದೊಡ್ಡ ಅನ್ಯಾಯ. ಈ ರಾಜ್ಯದ ಮುಖ್ಯಮಂತ್ರಿಯಾಗಬೇಕೆಂಬ ತೀವ್ರ ಆಸೆ ಅವರಿಗಿತ್ತು. ಈ ಹಂಬಲವನ್ನು ಅವರು ತಮ್ಮ ಆಪ್ತರ ಮುಂದೆಯೂ ವ್ಯಕ್ತಪಡಿಸಿದ್ದರು. ಆದರೆ ತಮ್ಮ ಜಾತಿಯೇ ಅದಕ್ಕೆ ಅಡ್ಡಿಯಾಗಲಿದೆ ಎಂದು ಅವರಿಗೆ ತಿಳಿದಿತ್ತು. ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾದ ರೀತಿಯಲ್ಲಿ ತಾವೂ ಆ ಸ್ಥಾನವನ್ನು ಅಲಂಕರಿಸಬಹುದು ಎಂದು ಅವರು ಭಾವಿಸಿದ್ದರು. ಈ ಕಿರುದಾರಿಯೇ ತಮ್ಮನ್ನು ವಿಧಾನಸೌಧದ ಮೂರನೇ ಮಹಡಿವರೆಗೆ ಕರೆದೊಯ್ಯಬಹುದು ಎಂದು ಅವರು ನಂಬಿದ್ದರು.

ಆದರೆ ಅನಂತಕುಮಾರ ದಿಲ್ಲಿಯಲ್ಲಿ ತಮ್ಮ ಪ್ರಾಬಲ್ಯ ಮತ್ತು ಸಾಮರ್ಥ್ಯವನ್ನು ಸಾಬೀತುಪಡಿಸಿದರು. ಒಕ್ಕಲಿಗರ ಪ್ರಾಬಲ್ಯದ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ 1996ರಿಂದ ಸತತವಾಗಿ ಆರು ಬಾರಿ ಸ್ಪರ್ಧಿಸಿ ಗೆದ್ದು 'ಸೋಲಿಲ್ಲದ ಸರದಾರ'ರಾಗಿ ಕೇಂದ್ರದಲ್ಲಿ ಸಚಿವರಾದರು. ಎರಡನೇ ಬಾರಿ ಗೆದ್ದು ಅಟಲ್ ಬಿಹಾರಿ ವಾಜಪೇಯಿ ಅವರ ಸಂಪುಟದಲ್ಲಿ ನಾಗರಿಕ ವಿಮಾನಯಾನ ಖಾತೆ ಸಚಿವರಾದಾಗ ಅವರಿಗೆ ಕೇವಲ ಮೂವತ್ತಾರೂವರೆ ವರ್ಷ ವಯಸ್ಸು. ನಂತರ ಪ್ರವಾಸೋದ್ಯಮ, ಸಂಸ್ಕೃತಿ, ಯುವಜನ ಸೇವೆ, ನಗರಾಭಿವೃದ್ಧಿ, ಬಡತನ ನಿರ್ಮೂಲನೆ, ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್, ರಾಸಾಯನಿಕ, ರಸಗೊಬ್ಬರ ಮತ್ತು ಸಂಸದೀಯ ವ್ಯವಹಾರಗಳ ಖಾತೆಗಳ ಸಚಿವರಾಗಿ ಕಾರ್ಯನಿರ್ವಹಿಸಿದರು.



ಕೇಂದ್ರದಲ್ಲಿ ಒಬ್ಬ ರಾಜಕಾರಣಿಯ ಅನುಭವವನ್ನು ಕೇವಲ ಮಂತ್ರಿ ಸ್ಥಾನದಿಂದ ಮಾತ್ರ ಅಳೆಯಲಾಗುವುದಿಲ್ಲ. ಅವರು ಯಾವ ಯಾವ ಸಂಸದೀಯ ಮಂಡಳಿ ಮತ್ತು ಸ್ಥಾಯಿ ಸಮಿತಿಗಳಿಗೆ ಅಧ್ಯಕ್ಷರಾಗಿದ್ದಾರೆ ಎಂಬುದರಿಂದಲೂ ನಿರ್ಧರಿಸಲಾಗುತ್ತದೆ. ಅನಂತಕುಮಾರ ಅವರು ಹಣಕಾಸು, ವಿದೇಶಾಂಗ ವ್ಯವಹಾರ, ಕಲ್ಲಿದ್ದಲು, ಉಕ್ಕು ಮತ್ತು ಗಣಿ, ರಾಸಾಯನಿಕ ಹಾಗೂ ರಸಗೊಬ್ಬರ ಖಾತೆಗಳ ಸಂಸದೀಯ ಮಂಡಳಿಗಳಿಗೆ ಅಧ್ಯಕ್ಷರಾಗಿದ್ದರು. ಈ ಐದು ಪ್ರಮುಖ ಮಂಡಳಿಗಳಿಗೆ ಬಿಜೆಪಿಯಿಂದ ಅಧ್ಯಕ್ಷರಾದ ಇತರ ಇಬ್ಬರು ನಾಯಕರೆಂದರೆ ವಾಜಪೇಯಿ ಮತ್ತು ಅಡ್ವಾಣಿ.

ಅನಂತಕುಮಾರರು ಕೇಂದ್ರದಲ್ಲಿ ಮಂತ್ರಿಯಾಗಿದ್ದ ಇಪ್ಪತ್ತು ವರ್ಷಗಳಲ್ಲಿ ಉತ್ತರ ಭಾರತ ಮತ್ತು ದಕ್ಷಿಣ ಭಾರತಕ್ಕೆ ಕೊಂಡಿಯಾಗಿದ್ದರು. ಕರ್ನಾಟಕವೊಂದೇ ಅಲ್ಲದೆ ದಕ್ಷಿಣ ಭಾರತದ ಇತರ ರಾಜ್ಯಗಳ ಸಮಸ್ಯೆ ಮತ್ತು ವಿವಾದಗಳು ಉಂಟಾದಾಗ ಅನಂತಕುಮಾರ ಅವರ ಪಾತ್ರ ಎದ್ದು ಕಾಣುತ್ತಿತ್ತು. ಇನ್ನು ಕರ್ನಾಟಕದ ಮಟ್ಟಿಗೆ, ಕೇಂದ್ರ ಮತ್ತು ರಾಜ್ಯದಲ್ಲಿ ಯಾವುದೇ ಸರ್ಕಾರವಿರಲಿ, ದಿಲ್ಲಿ ಮತ್ತು ಬೆಂಗಳೂರಿಗೆ ಅನಂತಕುಮಾರ ಅವರೇ ಸಂಪರ್ಕ ಸೇತುವಾಗಿದ್ದರು.

ಪುಟ 4 ರಲ್ಲಿ ಮುಂದುವರಿದಿದೆ

## ಭೈರಪ್ಪನವರು ಮೆಚ್ಚಿದ ಅನ್ನಪೂರ್ಣ ಅಡುಗೆ ಮನೆ



ಖ್ಯಾತ ಕಾದಂಬರಿಕಾರರು ಮತ್ತು ಸರಸ್ವತಿ ಸಮ್ಮಾನ್ ಪುರಸ್ಕೃತ ಹಿರಿಯ ಸಾಹಿತಿ, ಶ್ರೀ ಎಸ್. ಎಲ್. ಭೈರಪ್ಪನವರು ಭಾರತೀಯ ಸಾಹಿತ್ಯದಲ್ಲಿ ತಮ್ಮದೇ ಆದ ಛಾಪು ಮೂಡಿಸಿದವರು. ತಮ್ಮ ಆಳವಾದ ಚಿಂತನೆಗಳು ಮತ್ತು ವಿಶಿಷ್ಟ ನಿರೂಪಣಾ ಶೈಲಿಯಿಂದ ಗುರುತಿಸಲ್ಪಡುವ ಅವರ ಕಾದಂಬರಿಗಳು ಸಮಾಜದ ಮತ್ತು ತತ್ವಶಾಸ್ತ್ರದ ಹಲವು ಆಯಾಮಗಳನ್ನು ತೆರೆದಿಡುತ್ತವೆ. ಭೈರಪ್ಪನವರು ಹಾಗೂ ಹೆಸರಾಂತ ಕಾದಂಬರಿಗಾರ್ತಿ ಶ್ರೀಮತಿ ಸಹನಾ ವಿಜಯಕುಮಾರ್ ಅವರು ಏಪ್ರಿಲ್ 1, 2025 ರಂದು ಗವಿಪುರದಲ್ಲಿರುವ ಅದಮ್ಯ ಚೇತನದ ಅನ್ನಪೂರ್ಣ ಅಡುಗೆ ಮನೆಗೆ ಭೇಟಿ ನೀಡಿದರು.

ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಪಿ. ವಿ. ಕೃಷ್ಣ ಭಟ್ ಅವರು  ಅವರು ಶ್ರೀ ಎಸ್. ಎಲ್. ಭೈರಪ್ಪನವರಿಗೆ ಶೂನ್ಯ ತ್ಯಾಜ್ಯ ಅಡುಗೆ ಮನೆಯ ಕಾರ್ಯನಿರ್ವಹಣೆಯ ಕುರಿತು ವಿವರವಾಗಿ ತಿಳಿಸಿದರು. ಅಲ್ಲದೆ, ಅನಂತಕುಮಾರ್ ಪ್ರತಿಷ್ಠಾನದ ಚಟುವಟಿಕೆಗಳು,  ಅದಮ್ಯ ಚೇತನದ ದೇಗುಲದರ್ಶನ ಯೋಜನೆಯಡಿ ಪ್ರಕಟಿಸಿದ  ನಾಡಿನ 63 ಅಜ್ಞಾತ ಹಾಗೂ ಅಪರಿಚಿತ ದೇವಾಲಯಗಳನ್ನು ಪ್ರತ್ಯೇಕವಾಗಿ ಪರಿಚಯಿಸುವ  ಬುಕ್‌ಮಾರ್ಕ್ ಮತ್ತು ಪರಿಸರ ಸ್ನೇಹಿ ಯೋಜನೆಗಳ ಬಗ್ಗೆಯೂ ಮಾಹಿತಿ ನೀಡಿದರು.

ಅಡುಗೆ ಮನೆಯ ಕಾರ್ಯವೈಖರಿಯನ್ನು ಕಂಡು ಸಂತಸಗೊಂಡ ಶ್ರೀ ಎಸ್. ಎಲ್. ಭೈರಪ್ಪನವರು, ಇದು ಕೇವಲ ಅಡುಗೆ ಮನೆಯಲ್ಲ, ಒಂದು ಪವಿತ್ರ ಸ್ಥಳದಂತೆ ಭಾಸವಾಗುತ್ತಿದೆ ಎಂದು  ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅದಮ್ಯ ಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು, ಶ್ರೀ ಭೈರಪ್ಪನವರು ಮತ್ತು ಶ್ರೀ ಅನಂತಕುಮಾರ್ ಅವರ ನಡುವೆ ಆತ್ಮೀಯ ಸಂಬಂಧವಿತ್ತು. ಸಾಹಿತ್ಯಾಸಕ್ತರ ಬಗ್ಗೆ ಅನಂತಕುಮಾರ್ ಅವರಿಗೆ ವಿಶೇಷ ಕಾಳಜಿ ಇತ್ತು ಎಂದು ಸ್ಮರಿಸಿಕೊಂಡರು.  ಈ ಕಾರ್ಯಕ್ರಮದಲ್ಲಿ ಪ್ರೊ. ಪಿ. ವಿ. ಕೃಷ್ಣ ಭಟ್ ಅವರು ಶ್ರೀ ಎಸ್. ಎಲ್. ಭೈರಪ್ಪನವರನ್ನು ಗೌರವಿಸಿದರು. ಅದಮ್ಯ ಚೇತನದ ಸಿಬ್ಬಂದಿ ವರ್ಗ, ಕಾರ್ಯಕರ್ತರು ಮೊದಲಾದವರು ಭಾಗವಹಿಸಿದ್ದರು.

# ಹಜಾರರಾಮ ದೇವಾಲಯ

ಶ್ರದ್ಧೆಯ ಶಿಲ್ಪ
ಟಿ. ಎಸ್. ಗೋಪಾಲ್



ಹಜಾರ್ ಎಂದರೆ ಸಾವಿರ. ಈ ದೇವಾಲಯದ ಗೋಡೆಗಳ ಮೇಲೆಲ್ಲ ರಾಮಾಯಣದ ಕಥಾವಳಿಯ ನೂರಾರು ಉಬ್ಬುಚಿತ್ರಗಳನ್ನು ನಿರೂಪಿಸಿರುವುದರಿಂದ ಈ ಗುಡಿಗೆ ಹಜಾರರಾಮ ದೇಗುಲವೆಂಬ ಹೆಸರು ಬಂದಿತೋ ಏನೋ. ಹಜಾರ ಎಂದರೆ ಆವರಣ ಎಂದೂ ಅರ್ಥ, ವಿಜಯನಗರದ ಉಳಿದ ದೇವಾಲಯಗಳಂತಲ್ಲದೆ ಅರಮನೆಯ ಆವರಣದಲ್ಲೇ ಕಟ್ಟಲಾದ ಗುಡಿಯಾದುದರಿಂದಲೂ ಹಜಾರರಾಮನೆಂಬ ಹೆಸರು ಬಂದಿದ್ದೀತು. ರಾಜಗೋಪುರಗಳಿಲ್ಲದ, ಹೊರಗೋಡೆ, ಒಳಗೋಡೆಗಳ ಮೇಲೆಲ್ಲ ಅತ್ಯಾಕರ್ಷಕ ಉಬ್ಬುಶಿಲ್ಪಗಳಿಂದ ಕೂಡಿದ, ಹಂಪೆಯ ಇತರ ಸ್ಮಾರಕಗಳಂತೆ ಹಾಳುಬೀಳದ ನಿರ್ಮಾಣವಾದುದರಿಂದ ಈ ದೇವಾಲಯ ಇನ್ನಷ್ಟು ವಿಶಿಷ್ಟವೆನಿಸಿ ಬೆರಗು ಹುಟ್ಟಿಸುತ್ತದೆ.

15ನೆಯ ಶತಮಾನದ ಪ್ರಾರಂಭದಲ್ಲಿ ಮೊದಲನೆ ದೇವರಾಯನು ಕಟ್ಟಿಸಿದ ಈ ದೇವಾಲಯದ ಸೊಬಗು ಅಸಾಮಾನ್ಯ. ದೇವಾಲಯದ ಹೊರಪ್ರಾಕಾರದ ಗೋಡೆಗಳ ತುಂಬ ಉಬ್ಬುಚಿತ್ರಗಳು. ನವರಾತ್ರಿಯ ದಿನಗಳಂದು ಮಹಾನವಮಿ ದಿಬ್ಬದ ಎದುರು ನಡೆಯುತ್ತಿದ್ದ ಸಾಂಸ್ಕೃತಿಕ ಚಟುವಟಿಕೆ, ಮೆರವಣಿಗೆಗಳ ವೈಭವದ ನಿರೂಪಣೆ, ಆನೆ, ಕುದುರೆ, ವಾದ್ಯಗಾರರು, ನರ್ತಕಿಯರು ಮೊದಲಾದವರ ಹಾವಭಾವಗಳು ಒಂದಕ್ಕಿಂತ ಒಂದು ವಿಭಿನ್ನ, ವಿಶೇಷ. ಇಡೀ ಗೋಡೆಯನ್ನು ತುಂಬುವ ಹಾಗೆ ಐದು ಅಡ್ಡಸಾಲು. ಇವುಗಳಲ್ಲಿ ಅನುಕ್ರಮವಾಗಿ ನರ್ತಕನರ್ತಕಿಯರು, ಸೈನಿಕರು, ಕುದುರೆಗಳನ್ನು ಕರೆತರುವ ರಾವುತರು, ಕೆಳಸಾಲಿನಲ್ಲಿ ಮಾವುತರೊಡನೆ ಸಾಲಂಕೃತ ಆನೆಗಳು.



ದೇವಾಲಯದ ಪ್ರವೇಶದ್ವಾರದಲ್ಲಿರುವ ಮಹಿಷಮರ್ದಿನಿ, ಭೈರವರ ಉಬ್ಬುಶಿಲ್ಪಗಳೂ ವಿಶೇಷ. ಒಳಪ್ರಾಕಾರವನ್ನು ದಾಟಿ ದೇಗುಲದ ಗೋಡೆಗಳತ್ತ ಕಣ್ಣುಹಾಯಿಸಿದಲ್ಲೆಲ್ಲ ರಾಮಾಯಣದ ಕಥಾದೃಶ್ಯಗಳೇ. ಈ ಘಟನಾವಳಿಯ ನಿರೂಪಣೆ ಮೇಲುನೋಟಕ್ಕೆ ಒಂದಕ್ಕೊಂದು ಸಂಬಂಧವಿಲ್ಲದಂತೆ ಕಂಡರೂ ಒಳದೇಗುಲದ ನಿರ್ದಿಷ್ಟ ಮೂಲೆಯಿಂದ ಪ್ರಾರಂಭಿಸಿ ಸಮಾಂತರವಾಗಿ ಮೂರು ಪ್ರತ್ಯೇಕಸಾಲುಗಳಲ್ಲಿ ಮುಂದುವರೆದಿರುವುದನ್ನು ಗುರುತಿಸಬಹುದು. ಸಪಾಟಾದ ಗೋಡೆ ಕೊನೆಗೊಳ್ಳುವಲ್ಲಿ ರಾಮಾಯಣದ ಕಥೆ ತಾತ್ಕಾಲಿಕವಾಗಿ ನಿಲ್ಲುತ್ತದೆ. ಕಂಬದ ಮೇಲೆ ಗರುಡನೋ ನರ್ತಕಿಯೋ ಕಾಣಿಸುತ್ತಾರೆ. ಇನ್ನೊಂದು ಗೋಡೆಯಲ್ಲಿ ಕಥೆ ಮುಂದುವರೆಯುತ್ತದೆ. ದಶರಥನು ಋಷ್ಯಶೃಂಗಮುನಿಗಳನ್ನು ಯಾಗಕ್ಕೆ ಆಹ್ವಾನಿಸುವುದರಿಂದ ಮೊದಲುಗೊಂಡು ಅಯೋಧ್ಯೆಯ ರಾಜಕುಮಾರರ ಜನನ, ತಾಟಕೀವಧೆ, ಸೀತಾಸ್ವಯಂವರ, ಕೈಕೇಯಿಯ ತಂತ್ರ, ರಾಮನ ವನವಾಸ, ಮಾಯಾಜಿಂಕೆ, ಸೀತಾಪಹರಣ, ಸುಗ್ರೀವಸಖ್ಯ, ಹನುಮಂತನ ಸೀತಾನ್ವೇಷಣೆ, ಸೇತುಬಂಧ, ರಾಮ-ರಾವಣರ ಯುದ್ಧ, ಶ್ರೀರಾಮಪಟ್ಟಾಭಿಷೇಕದ ದೃಶ್ಯಗಳೆಲ್ಲ ಇಲ್ಲಿನ ಗೋಡೆಗಳ ಮೇಲೆ ಉಬ್ಬುಚಿತ್ರಗಳಾಗಿ ಮೂಡಿರುವ ಬಗೆ ಮನಸೂರೆಗೊಳ್ಳುತ್ತದೆ.


ಪ್ರತಿ ಅಡ್ಡಸಾಲು ತಲಾ ಮೂರು ಸನ್ನಿವೇಶಗಳನ್ನು ಚಿತ್ರಿಸುತ್ತಿದ್ದು ಪ್ರತಿ ಚಿತ್ರವನ್ನು ನಡುವಣ ಕಂಬವೊಂದು ಪ್ರತ್ಯೇಕಿಸುತ್ತದೆ. ಉತ್ತರಕಾಂಡದ ಲವಕುಶರ ಕಥೆಯೂ ನಿರೂಪಿತವಾಗಿದೆ. ರಾಮಾಯಣಕಥಾವಳಿಯೇ ಅಲ್ಲದೆ, ಶ್ರೀಕೃಷ್ಣನ ಉಬ್ಬುಶಿಲ್ಪಗಳೂ ಗಮನಸೆಳೆಯುತ್ತವೆ. ಅಷ್ಟಭುಜಗಳ ವೇಣುಗೋಪಾಲನ ಉಬ್ಬುಶಿಲ್ಪ ಅತಿ ವಿಶೇಷವಾದುದು. ಒಳಗುಡಿಯ ನವರಂಗದ ಮಂಟಪ ಇನ್ನಷ್ಟು ವಿಶೇಷ. ವಿಶೇಷ ಕೆತ್ತನೆಯುಳ್ಳ ಕಪ್ಪು ಕಲ್ಲಿನ ನಾಲ್ಕು ಮಂಟಪಗಳು, ಅದೂ ಕೊಂಚವೂ ಮುಕ್ಕಾಗದ ಸ್ಥಿತಿಯಲ್ಲಿ, ಕಂಡುಬರುವುದೊಂದು ಅಚ್ಚರಿಯೇ ಸರಿ. ಮಹಾವಿಷ್ಣುವಿನ ವಿವಿಧ ರೂಪಗಳೂ ಇತರ ದೇವತೆಗಳೂ ಈ ಕಂಬಗಳನ್ನು ಅಲಂಕರಿಸಿದ್ದಾರೆ. ಗರ್ಭಗುಡಿಯೊಂದು ಮಾತ್ರವೇ ಶಿಲ್ಪವಿಲ್ಲದೆ ಕಳಾಹೀನವಾಗಿದೆ.

ಒಂದಿಂಚೂ ಬಿಡದಂತೆ ಇಡಿಯ ಕಟ್ಟಡವು ವಿಜಯನಗರ ಕಾಲದ ಶಿಲ್ಪಕಲಾಕೌಶಲವನ್ನು ಮೆರೆಸುವಂತಿರುವುದೇ ಈ ಕಟ್ಟಡದ ವಿಶೇಷ. ಜಗತಿಯ ಸ್ತರಗಳ ಮೇಲೂ ಬಳ್ಳಿಗಳ ವಿನ್ಯಾಸ, ಹೂಬಳ್ಳಿಗಳು, ಸಿಂಹಮುಖಗಳನ್ನು ಚಿತ್ರಿಸಲಾಗಿದೆ. ಕೆಳಹಂತದ ಶಿಲಾಭಿತ್ತಿಯ ಮೇಲೆ ನರ್ತಕಿಯರ ಹಾವಭಾವ, ಯೋಧರ ಸಾಹಸ, ಅಪ್ಸರೆಯರು, ದೇವತೆಗಳು ಮೊದಲಾದವನ್ನು ಚಿತ್ರಿಸಲಾಗಿದೆ. ದೇವಾಲಯದೊಳಗಿಂದ ನೀರಿನ ಹೊರಹರಿವಿಗಾಗಿ ಕಟ್ಟಿದ ಪ್ರಣಾಳವೂ ಚಿತ್ರವತ್ತಾಗಿದೆ. ಪ್ರತಿಯೊಂದು ಕಂಬವೂ ವಿವಿಧ ಉಬ್ಬುಶಿಲ್ಪಗಳಿಂದ ಅಲಂಕೃತವಾಗಿದ್ದರೆ ಪ್ರತಿಯೊಂದು ದ್ವಾರಬಂಧವೂ ಇಡಿಯ ಸೂಕ್ಷ್ಮ ಕೆತ್ತನೆಗಳಿಂದ ಮನಸೆಳೆಯುತ್ತದೆ. ದೇವಾಲಯದ ಭಿತ್ತಿಯು ಮೇಲಿನ ಸೂರನ್ನು ತಲುಪುವೆಡೆಯಲ್ಲಿ ಒಳಗೋಡೆಯ ಮೇಲುತುದಿಯಲ್ಲಿ ಉದ್ದಕ್ಕೂ ವಿವಿಧ ಭಂಗಿಯ ಯಕ್ಷರನ್ನು ಚಿತ್ರಿಸಿದೆ. ಪ್ರತಿ ಗರ್ಭಗುಡಿಯ ಮೇಲೂ ಗಾರೆಗಚ್ಚಿನ ವಿಮಾನಶಿಖರವಿದ್ದು ಹಾಳಾಗದೆ ಉಳಿದಿರುವುದು ವಿಶೇಷವೇ. ಆದರೆ ಗೋಪುರವನ್ನು ಅಲಂಕರಿಸಿರುವ ಗಾರೆಯ ಪ್ರತಿಮೆಯೊಂದೂ ಉಳಿದಿಲ್ಲ.

ವಿಜಯನಗರ ಪತನವಾದ ಭೀಕರ ಸಮಯದಲ್ಲಿ ಹಂಪೆಯ ಎಲ್ಲ ದೇಗುಲಗಳನ್ನು ವಿಶೇಷವಾಗಿ ವೈಷ್ಣವಗುಡಿಗಳನ್ನು ಹಾಳುಗೆಡವಲಾಯಿತು. ಅರಮನೆಯ ಆವರಣದಲ್ಲಂತೂ ಒಂದು ಕಟ್ಟಡವನ್ನೂ ಬಿಡದೆ ನೆಲಸಮಮಾಡಲಾಯಿತು. ಆದರೆ, ಅರಮನೆಯ ಪರಿಸರದೊಳಗೇ ಇದ್ದ ಈ ಹಜಾರರಾಮ ದೇವಾಲಯದ ಕಟ್ಟಡವೊಂದು ಶತ್ರುಗಳ ಹಾಗೂ ಲೂಟಿಕಾರರ ನಿರ್ದಯೆಗೆ ಗುರಿಯಾಗದೆ ಹೇಗೋ ಉಳಿದುಕೊಂಡಿತು. ದೇವಾಲಯದ ಸಂಪತ್ತು ವಶವಾದ ಮೇಲೆ ಕಲ್ಲಿನ ಕಟ್ಟಡವನ್ನು ಕೆತ್ತುವ ಕಷ್ಟ ಏಕೆಂದು ಭಾವಿಸಿದರೋ ಏನೋ!

**ಸೌಜನ್ಯ: ಆಕಾಶವಾಣಿ, ಮೈಸೂರು**
**ಚಿತ್ರ ಸೌಜನ್ಯ: ಟಿ. ಎಸ್. ಗೋಪಾಲ್**







ಅನಂತಯಾನ

ನಿರೂಪಣೆ : ಟಿ.ಎಸ್. ಗೋಪಾಲ್

# ಹಾಲು ಕೊಟ್ಟು ಪುರಸ್ಕರಿಸಿದ ತಾಯಿ

**ಅಧ್ಯಾಯ-33**

ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಒಂದು ದಿನ ಅಚ್ಯುತ ಲಿಮಯೆಯ ಸೋದರಮಾವ ನರಹರಿ ಫಡಕೆ ತನ್ನ ಮನೆಗೆ ಬಂದು ಸಂಘದ ಕೆಲಸ ಮಾಡುವುದಕ್ಕೆ ಸಹಾಯಕನಾಗಿ ಬರುವಂತೆ ಕೇಳಿದಾಗ ಅಚ್ಯುತ ಕೂಡಲೇ ಒಪ್ಪಿಕೊಂಡು ಹೋಗಿದ್ದ. ಅಂದು ಶ್ರೀ ಹೊ.ವೆ. ಶೇಷಾದ್ರಿಯವರು ಈ ಹುಡುಗರಿಗಾಗಿ ಒಂದು ಬೈಠಕ್ ನಡೆಸಿದ್ದರು. ಅಲ್ಲಿ ಶೇಷಾದ್ರಿಯವರು ಒಂದು ಪ್ರಶ್ನೆ ಕೇಳಿದ್ದರು : "ಹೀಗೊಂದು ಹೋರಾಟ ಮಾಡಿದರೆ ಯಾರು ಪಾಲ್ಗೊಳ್ಳುತ್ತೀರಾ?"

ಅರವತ್ತು ಎಪ್ಪತ್ತು ಜನ ಯುವಕರಿದ್ದ ಆ ಗುಂಪಿನಲ್ಲಿ ಕೈ ಎತ್ತಿದ್ದು ಒಬ್ಬನೇ- ಅಚ್ಯುತ ಲಿಮಯೆ. ಕೈಯೆತ್ತಬೇಕೋ ಬೇಡವೋ ಗೊತ್ತಿಲ್ಲದೆಯೇ ಅಂದು ಕೈಯೆತ್ತಿರಬಹುದು. ಆದರೆ, ತನ್ನ ಜೊತೆಗಾರರು ಸತ್ಯಾಗ್ರಹದಲ್ಲಿ ಭಾಗವಹಿಸಲು ಹೊರಟಾಗ ಮುಂಚೂಣಿಯಲ್ಲಿದ್ದ ಕೆಲವರಲ್ಲಿ ಅಚ್ಯುತನೂ ಒಬ್ಬ!

ಉಮಾಮಹೇಶ್ವರನ ತಂದೆ ವಿಶ್ವೇಶ್ವರರಾವ್ ಹುಬ್ಬಳ್ಳಿಯ ಕಾಡಸಿದ್ದೇಶ್ವರ ಆರ್ಟ್ಸ್ ಕಾಲೇಜಿನಲ್ಲಿ ಇಂಗ್ಲೀಶ್ ಉಪನ್ಯಾಸಕರಾಗಿದ್ದರು. ಅವರು ಈ ಮುನ್ನ ಹಾವೇರಿಯಲ್ಲಿದ್ದಾಗ ಅವರ ಆತ್ಮೀಯ ಮಿತ್ರ ಪ್ರೊ. ವಾಮನ ದೇಶಪಾಂಡೆ ಎಂಬುವವರು ಸಂಘದ ಸ್ವಯಂಸೇವಕರಾಗಿದ್ದರು. ದೇಶಪಾಂಡೆಯವರ ಪ್ರಭಾವದಿಂದ ವಿಶ್ವೇಶ್ವರರಾಯರಿಗೂ ಸಂಘದ ಚಟುವಟಿಕೆಗಳಲ್ಲಿ ಆಸಕ್ತಿ ಬೆಳೆಯಿತು. ವಿಶ್ವೇಶ್ವರರಾಯರು ತಮ್ಮ ಮಗ ಉಮಾಮಹೇಶ್ವರ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗಲೇ ಅವನನ್ನು ಸಂಘದ ಶಾಖೆಗೆ ಸೇರಿಸಿದ್ದರು. ಹುಬ್ಬಳ್ಳಿಗೆ ಬಂದಮೇಲೂ ಇದು ಮುಂದುವರಿಯಿತು.


ಸಂಘದ ಹಿರಿಯ ಮಹನೀಯರೂ ಹಲವಾರು ಕಾರ್ಯಕರ್ತರೂ ವಿಶ್ವೇಶ್ವರರಾಯರ ಮನೆಗೆ ಆಗಾಗ ಬರುತ್ತಿದ್ದರು. ತುರ್ತುಪರಿಸ್ಥಿತಿಯ ಅವಧಿಯಲ್ಲೂ ಈ ಸಂಪರ್ಕ ಮುಂದುವರಿದಿತ್ತು. ಒಮ್ಮೆ ಶ್ರೀ ಹೊ.ವೆ. ಶೇಷಾದ್ರಿಯವರು ಇವರ ಮನೆಗೆ ಬಂದು ಒಂದು ವಾರ ತಂಗಿದ್ದುಂಟು. ಶೇಷಾದ್ರಿಯವರ ಬರೆಹಗಳು, ಶ್ರೀ ಹರಿಭಾವು ವಜೆಯವರ ಮಾರ್ಗದರ್ಶನ ಎಲ್ಲವೂ ಉಮಾಮಹೇಶ್ವರನ ಮೇಲೆ ತುಂಬ ಪ್ರಭಾವ ಬೀರಿದ್ದುವು.

ಅನಂತಕುಮಾರ ಮತ್ತಿತರ ಗೆಳೆಯರೊಡನೆ ತಾನೂ ಸತ್ಯಾಗ್ರಹಿಯಾಗಿ ಹೋಗಲು ನಿರ್ಧರಿಸಿರುವುದಾಗಿ ಉಮಾಮಹೇಶ್ವರ ಹೇಳಿದಾಗ ಆತನ ತಂದೆ ಸಂತೋಷದಿಂದಲೇ ಅನುಮತಿ ಕೊಟ್ಟಿದ್ದರು. ಉಮಾಮಹೇಶ್ವರ ಪ್ರತಿಭಾಶಾಲಿ ಹುಡುಗ. ದ್ವಿತೀಯ ಪಿ.ಯು.ಸಿ ತರಗತಿಯಲ್ಲಿ ರ್‍ಯಾಂಕ್ ಗಳಿಸುವ ನಿರೀಕ್ಷೆಯಿಟ್ಟುಕೊಂಡಿದ್ದ. ಆದರೂ ಅವನು ಸತ್ಯಾಗ್ರಹದಲ್ಲಿ ಭಾಗವಹಿಸಿ ಬರಲಿ ಎಂದು ಅವನ ತಂದೆ ಆಶಿಸಿದ್ದರಲ್ಲಿ ಸಂಘದ ಧ್ಯೇಯ ಆದರ್ಶಗಳ ಬಗೆಗಿನ ಅವರ ವಿಶ್ವಾಸ ಎದ್ದು ತೋರುವಂತಹುದು.

ಉಮಾಮಹೇಶ್ವರ ಸೆರೆಮನೆಗೆ ಹೋಗಲಿಚ್ಛಿಸಿದ್ದಾನೆಂದು ಅವನ ತಂದೆಗೆ ತಿಳಿದಿತ್ತೋ ಇಲ್ಲವೋ. ಆದರೆ, ತುರ್ತುಪರಿಸ್ಥಿತಿಯ ಅತಿರೇಕಗಳನ್ನು ಗಮನಿಸುವಾಗ ಸತ್ಯಾಗ್ರಹದ ಪರಿಣಾಮ ಬಂಧನವೇ ಎಂಬುದನ್ನು ಅವರು ಊಹಿಸಿದ್ದಿರಬಹುದು. ಉಳಿದ ಸತ್ಯಾಗ್ರಹಿಗಳು ಜೈಲಿಗೆ ಹೋಗುವುದಿರಲಿ, ಸತ್ಯಾಗ್ರಹದಲ್ಲಿ ತಾವು ಭಾಗವಹಿಸುವ ವಿಷಯವನ್ನೇ ತಮ್ಮ ಮನೆಗಳಲ್ಲಿ ಹೇಳಿರಲಿಲ್ಲ - ಅನಂತಕುಮಾರ್ ಒಬ್ಬರನ್ನು ಹೊರತುಪಡಿಸಿ. ತುರ್ತುಪರಿಸ್ಥಿತಿಯ ಘೋಷಣೆಯಾದಾಗಲೇ ಗಿರಿಜಾ ಶಾಸ್ತ್ರಿಯವರು ಅದನ್ನು ತೀವ್ರವಾಗಿ ವಿರೋಧಿಸಿದ್ದರು. ಇದು ಪ್ರಜಾಪ್ರಭುತ್ವದ ಮೇಲಿನ ದಬ್ಬಾಳಿಕೆಯಲ್ಲದೆ ಮತ್ತೇನೂ ಅಲ್ಲ ಎಂದಿದ್ದರು. ಅವರೇನಾದರೂ ಪೂರ್ಣವಾಗಿ ಆರೋಗ್ಯದಿಂದ ಇದ್ದಿದ್ದರೆ ತಾವೂ ಪ್ರತ್ಯಕ್ಷವಾಗಿ ಸತ್ಯಾಗ್ರಹ ಆಂದೋಲನದಲ್ಲಿ ಧುಮುಕಿಬಿಡುತ್ತಿದ್ದರೋ ಏನೋ.

ಅಂದು ತಮ್ಮ ಮಗ ಅನಂತಕುಮಾರ ಸತ್ಯಾಗ್ರಹಕ್ಕೆ ಹೊರಡುತ್ತಿರುವುದಾಗಿ ಹೇಳಿದಾಗ ತಾಯಿ ಗಿರಿಜಾ ತುಂಬ ಸಂತೋಷಪಟ್ಟರು. ಅವನೊಡನೆ ಕಾಲೊನಿಯ ಮತ್ತೊಬ್ಬ ಹುಡುಗ ಗುರುರಾಜ ಮುತಾಲಿಕ್ ಸಹ ಹೋಗುತ್ತಿರುವುದಾಗಿ ತಿಳಿಯಿತು. ಗುರುರಾಜನ ಮನೆಯವರಿಗೆ ತಿಳಿದಿತ್ತೋ ಇಲ್ಲವೋ. ಬೆಳಗ್ಗೆಯೇ ಕಾಲೇಜಿಗೆ ಹೊರಟು ನಿಂತ ಅನಂತಕುಮಾರನನ್ನೂ ಗುರುರಾಜನನ್ನೂ ಕೂರಿಸಿ ಒಂದೊಂದು ಲೋಟ ಹಾಲು ಕೊಟ್ಟು 'ಹೋಗಿಬನ್ನಿ' ಎಂದು ಹರಸಿ ಕಳುಹಿಸಿದರು.

ಉಳಿದ ಪೋಷಕರಿಗೆ ತಮ್ಮ ಹುಡುಗರು ಹೀಗೊಂದು ಸತ್ಯಾಗ್ರಹ ಮಾಡಿ ಬಂಧನಕ್ಕೆ ಗುರಿಯಾಗಿದ್ದಾರೆಂದು ಗೊತ್ತಾಗಿದ್ದು, ಅಂದು ಸಂಜೆ ಕಾಲೇಜಿನಿಂದ ಹಿಂತಿರುಗಿ ಬಂದ ಇತರ ಕಾಲೇಜು ವಿದ್ಯಾರ್ಥಿಗಳು ಹೇಳಿದಮೇಲೆಯೇ. ಸತ್ಯಾಗ್ರಹ ಹೇಗೆ ನಡೆಯಬೇಕೆಂದು ಗೆಳೆಯರು ಬಯಸಿದ್ದರೋ ಹಾಗೆಯೇ ಎಲ್ಲವೂ ನಡೆದವು. ಎಲ್ಲ ಕಾಲೇಜುಗಳಿಂದಲೂ ಹುಡುಗರು ಮೆರವಣಿಗೆಯಲ್ಲಿ ಸೇರಿದರು. ರಸ್ತೆಯೇ ಕಾಣದಷ್ಟು ಹುಡುಗರು, ಕರಪತ್ರಗಳು. ಭಾಷಣ, ಬಂಧನ ಎಲ್ಲವೂ ಪೂರ್ವಸಿದ್ಧತೆಗೆ ಅನುಗುಣವಾಗಿಯೇ ನೆರವೇರಿದ್ದವು. ಹುಬ್ಬಳ್ಳಿ ಕಾರ್ಪೋರೇಶನ್ ಸಮೀಪದ ಸಬರ್ಬ್ ಪೋಲೀಸ್ ಸ್ಟೇಶನ್ ತಲುಪುವ ಹೊತ್ತಿಗೆ ಸಂಜೆ ಐದು ಗಂಟೆ ದಾಟಿತ್ತು. ಸತ್ಯಾಗ್ರಹಿಗಳನ್ನು ಪೋಲೀಸ್ ಸ್ಟೇಷನ್ನಿಗೆ ಕರೆತರುವಾಗಲೂ ಯಾರ ಮುಖದಲ್ಲೂ ಅಧೈರ್ಯ ಕಾಣಲಿಲ್ಲ; ಎಲ್ಲರೂ ಖುಷಿಯಿಂದ ನಗುನಗುತ್ತಲೇ ಒಳಬಂದರು.



ತಾವು ಜೈಲಿಗೆ ಹೋಗಬೇಕಾಗಿದೆ ಎನ್ನುವ ವಾಸ್ತವವೇನೂ ಈ ಹುಡುಗರ ಧೈರ್ಯವನ್ನು ಕುಂದಿಸಿರಲಿಲ್ಲ. ತಾವೇ ಸ್ವತಃ ಜೈಲಿಗೆ ಹೋಗುವ ಸಿದ್ಧತೆಯಲ್ಲಿದ್ದುದರಿಂದ ಫಡಕೆಯವರಿಗೆ ಉಳಿದ ಹುಡುಗರ ಮನೆಗಳವರನ್ನು ಸಂಪರ್ಕಿಸಲು ಸಾಧ್ಯವಾಗಿರಲಿಲ್ಲ. ಪ್ರದೀಪ್ ಮುಜುಂದಾರನ ತಂದೆಯವರಿಗೆ ಹಿಂದಿನ ದಿನ ತಾನೇ ಬೆಳಗಾವಿಗೆ ವರ್ಗಾವಣೆ ಆಗಿತ್ತು. ಅವರನ್ನು ಬೀಳ್ಕೊಡಲು ನರಹರಿ ಫಡಕೆಯವರು ರೈಲ್ವೆ ನಿಲ್ದಾಣಕ್ಕೆ ಹೋಗಿದ್ದರು. ಆಗ ಮುಜುಂದಾರರು "ನಮ್ಮ ಹುಡುಗನ ಜವಾಬ್ದಾರಿ ನಿಮ್ಮದೇ ಅಪ್ಪ" ಎಂದು ಹೇಳಿದ್ದರು. "ನೀವು ಏನೂ ಯೋಚನೆ ಮಾಡಬೇಡಿ, ನಾನು ನೋಡಿಕೊಳ್ಳುತ್ತೇನೆ" ಎಂದು ಫಡಕೆಯವರು ಉತ್ತರಿಸಿದರು. ಹೇಗೂ ಜೈಲಿನಲ್ಲಿ ಒಟ್ಟಿಗೇ ಇರುತ್ತೇವಲ್ಲ ಎಂದು ಮನಸ್ಸಿನಲ್ಲೇ ಹೇಳಿಕೊಂಡಿರಬೇಕು. ಬಾಯಿಮಾತಿನಲ್ಲಿ ಮತ್ತೇನೋ ಧೈರ್ಯ ಹೇಳಿದರು.

ಸ್ಟೇಷನ್ನಿಗೆ ಕರೆತಂದಮೇಲೆ ಫಡಕೆ ಮತ್ತವರ ಸಹಚರರ ಭಾವಚಿತ್ರಗಳನ್ನು ತೆಗೆಯುವ ಪ್ರಕ್ರಿಯೆ ಶುರುವಾಯಿತು. ಅನಂತಕುಮಾರ, ವಿಷ್ಣುಕಾಂತರು "ಅರೇ, ನಮ್ಮ ಫೋಟೋ ತೆಗೀತಾರೇನು? ಮುಖ ಎಲ್ಲ ಸ್ವಲ್ಪ ಬೆವರು ಹತ್ತಿ ಕೊಳೆಯಾಗಿಬಿಟ್ಟಿದೆ, ಮುಖ ತೊಳೆದುಕೊಂಡು ಪೌಡರ್ ಗಿವ್ಡರ್ ಹಚ್ಚಿಕೊಳ್ತೀವಿ, ಆಮೇಲೆ ನಮ್ಮ ಫೋಟೋ ತೆಗಿಯಲಿ" ಎಂದರು. ಪೋಲೀಸರು ಯಾಕೆ ತಮ್ಮ ಫೋಟೋ ತೆಗೆಯುತ್ತಾರೆ ಎನ್ನುವ ಕಲ್ಪನೆಯೇ ಆ ಸತ್ಯಾಗ್ರಹಿಗಳಿಗಿರಲಿಲ್ಲ. ಕಳ್ಳಕಾಕರ ಭಾವಚಿತ್ರಗಳನ್ನು ಹಾಕುವ ಫಲಕದಲ್ಲಿ ಪ್ರದರ್ಶಿಸುವುದಕ್ಕಾಗಿ ತಮ್ಮ ಫೋಟೋ ತೆಗೆಯುತ್ತಿದ್ದಾರೆ ಎನ್ನುವ ಸಂದೇಹವಾದರೂ ಅವರಿಗೆಲ್ಲಿಂದ ಬರಬೇಕು?

ಸ್ವಲ್ಪ ಹೊತ್ತಿಗೆ ಎಲ್ಲ ಸತ್ಯಾಗ್ರಹಿಗಳ ತಂದೆತಾಯಿಯರೂ ಅಲ್ಲಿಗೆ ಬಂದು ಸೇರಿದರು. ಬಹುಶಃ ಅವರ್‍ಯಾರೂ ಅಲ್ಲಿಯವರೆಗೆ ಪೋಲೀಸ್ ಸ್ಟೇಶನ್ ಮೆಟ್ಟಿಲು ಹತ್ತಿದವರೇ ಅಲ್ಲ. ಎಲ್ಲ ತಾಯಂದಿರೂ ತಮ್ಮ ಮಕ್ಕಳನ್ನು ನೋಡುತ್ತಿದ್ದಂತೆಯೇ ಅಳಲಾರಂಭಿಸಿದರು. ಆಗ ಅವರನ್ನೆಲ್ಲ ಸಮಾಧಾನಪಡಿಸುವ ಹೊಣೆಯನ್ನು ವಹಿಸಿಕೊಂಡವರು ಗಿರಿಜಾ ಶಾಸ್ತ್ರಿಯವರೇ.

" ನಿಮ್ಮ ಮಗ ಯಾವುದೇ ತಪ್ಪು ಮಾಡಿಲ್ಲ. ನೀವು ಯಾಕೆ ಹೀಗೆ ಅಳುತ್ತಿದ್ದೀರಿ? ಒಂದು ಒಳ್ಳೆಯ ಉದ್ದೇಶದಿಂದ ನಿಮ್ಮ ಮಗ ಸತ್ಯಾಗ್ರಹದಲ್ಲಿ ತೊಡಗಿಕೊಂಡಿದ್ದಾನೆ. ಇದಕ್ಕೆ ನೀವು ಸಂತೋಷಪಡಬೇಕು. ದಯವಿಟ್ಟು ಅಳಬೇಡಿ" ಎಂದು ಸಂತೈಸತೊಡಗಿದ್ದರು.

ಪುಟ 5 ರಲ್ಲಿ ಮುಂದುವರಿದಿದೆ

ಪುಟ 1 ರಿಂದ

# ರಾಜಕಾರಣದ ಸವ್ಯಸಾಚಿ ಅನಂತ


ಕರ್ನಾಟಕದಿಂದ ಯಾರೇ ನಿಯೋಗ ಹೋದರೂ, ಅದು ಸರ್ವಪಕ್ಷ ನಿಯೋಗವೇ ಆಗಿದ್ದರೂ, ಪಾರ್ಲಿಮೆಂಟ್ ಭವನ ಪ್ರವೇಶಕ್ಕೆ ಪಾಸ್ ನೀಡುವುದರಿಂದ ಹಿಡಿದು ಪ್ರಧಾನಿ ಮತ್ತು ರಾಷ್ಟ್ರಪತಿ ಭೇಟಿಯವರೆಗೆ ಅವರದೇ ಪ್ರಭಾವವಿರುತ್ತಿತ್ತು. ಕರ್ನಾಟಕಕ್ಕೆ ಪ್ರಧಾನಿ ಮತ್ತು ರಾಷ್ಟ್ರಪತಿಗಳನ್ನು ಕಾರ್ಯಕ್ರಮಕ್ಕೆ ಕರೆಯಿಸಬೇಕೆಂದರೂ ಅನಂತಕುಮಾರ ಅವರ ಮೂಲಕ ಹೋದರೆ ಕೆಲಸ ಸುಲಭವಾಗುತ್ತಿತ್ತು. ಅಷ್ಟರಮಟ್ಟಿಗೆ ಅನಂತಕುಮಾರ ಅವರ ದಿಲ್ಲಿಯ ಮನೆ 'ಕರ್ನಾಟಕ ಭವನ'ವೇ ಆಗಿತ್ತು! ಯಾರೇ ಅವರ ಮನೆಗೆ ಹೋದರೂ, ಊಟ, ತಿಂಡಿ ಮತ್ತು ಸಮಯವಿದ್ದರೆ ಭರ್ಜರಿ ಹರಟೆಗೆ ಅವರು ಎಂದಿಗೂ ಕೊರತೆ ಮಾಡುತ್ತಿರಲಿಲ್ಲ. ಅನಂತಕುಮಾರ ಅವರಿಗೆ ಕೇಂದ್ರ ರೈಲ್ವೆ ಸಚಿವರಾಗಬೇಕೆಂಬ ತೀವ್ರ ಆಸೆಯಿತ್ತು. ಅವರ ತಂದೆಯವರಾದ ನಾರಾಯಣ ಶಾಸ್ತ್ರಿಯವರು ತಮ್ಮ ಜೀವನದುದ್ದಕ್ಕೂ ರೈಲ್ವೆ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಅನಂತಕುಮಾರ ಅವರು ತಮ್ಮ ಬಾಲ್ಯ ಮತ್ತು ಯೌವನವನ್ನು ಹುಬ್ಬಳ್ಳಿಯ ರೈಲ್ವೆ ಕಾಲೊನಿಯಲ್ಲಿರುವ ಕ್ವಾರ್ಟರ್ಸ್‌ನಲ್ಲಿ ಕಳೆದವರು. ಹೀಗಾಗಿ ಮೊದಲಿನಿಂದಲೂ ಅವರಿಗೆ ಭಾರತೀಯ ರೈಲ್ವೆ ಬಗ್ಗೆ ಭಾವನಾತ್ಮಕ ಸಂಬಂಧವಿತ್ತು. ಆ ಖಾತೆ ಅವರಿಗೆ ಒಲಿಯಲಿಲ್ಲ. ತಮಗೆ ಸಿಕ್ಕ ಖಾತೆಯಲ್ಲಿಯೇ (ರಾಸಾಯನಿಕ ಮತ್ತು ರಸಗೊಬ್ಬರ) ಸಂತೃಪ್ತಿ ಕಂಡುಕೊಂಡರು. ಅಷ್ಟೇ ಅಲ್ಲ, ಉತ್ತಮ ಕೆಲಸ ಮಾಡಿ ದಕ್ಷತೆ ಮೆರೆದರು.

ವೆಂಕಯ್ಯನಾಯ್ಡು ಅವರು ಉಪರಾಷ್ಟ್ರಪತಿಯಾಗಿ ಆಯ್ಕೆಯಾದ ನಂತರ ಅವರು ನೋಡಿಕೊಳ್ಳುತ್ತಿದ್ದ ಸಂಸದೀಯ ವ್ಯವಹಾರಗಳ ಖಾತೆಯನ್ನು ಅನಂತಕುಮಾರ ಅವರಿಗೆ ಹೆಚ್ಚುವರಿಯಾಗಿ ನೀಡಲಾಯಿತು. ಅನಂತಕುಮಾರ ಅವರು ಎಲ್ಲಾ ರಾಜಕೀಯ ಪಕ್ಷಗಳ ನಾಯಕರೊಂದಿಗೆ ಹೊಂದಿದ್ದ ಉತ್ತಮ ಬಾಂಧವ್ಯ, ಗೆಳೆತನ, ಪರಿಚಯ ಮತ್ತು ಸ್ನೇಹಪರತೆಯೇ ಇದಕ್ಕೆ ಕಾರಣ. ವಾಜಪೇಯಿ ನಂತರ ಬಿಜೆಪಿಯಲ್ಲಿ 'ಅಜಾತಶತ್ರು' ಎಂಬ ವಿಶೇಷಣವನ್ನು ಯಾರಿಗೆ ಅನ್ವಯಿಸುವುದಾದರೆ ಅದು ಅನಂತಕುಮಾರ ಅವರಿಗೆ ಮಾತ್ರ.

ಮೂರು ವರ್ಷಗಳ ಹಿಂದೆ, ದಿಲ್ಲಿಯಲ್ಲಿ ನಡೆದ ಅನಂತಕುಮಾರ ಅವರ ಮೊದಲ ಮಗಳು ಐಶ್ವರ್ಯಾ ಅವರ ವಿವಾಹದ ಔತಣಕೂಟಕ್ಕೆ ಅಂದಿನ ರಾಷ್ಟ್ರಪತಿ ಪ್ರಣಬ್ ಮುಖರ್ಜಿ, ಪ್ರಧಾನಿ ನರೇಂದ್ರ ಮೋದಿ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಲಾಲೂ ಪ್ರಸಾದ್ ಯಾದವ್, ಸೀತಾರಾಂ ಯೆಚೂರಿ, ಮುಲಾಯಂ ಸಿಂಗ್ ಯಾದವ್, ಮಮತಾ ಬ್ಯಾನರ್ಜಿ, ಚಂದ್ರಬಾಬು ನಾಯ್ಡು ಸೇರಿದಂತೆ ಲೋಕಸಭೆ ಮತ್ತು ರಾಜ್ಯಸಭೆಯ ಎಲ್ಲಾ ಸದಸ್ಯರು (ಅನಾರೋಗ್ಯದಿಂದ ಮೂವರು ಗೈರುಹಾಜರಿದ್ದರು), ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ರಾಜ್ಯಪಾಲರು ಭಾಗವಹಿಸಿದ್ದು ಇದಕ್ಕೆ ಸಾಕ್ಷಿ. ಅವರಿಗೆ ದಿಲ್ಲಿಯಲ್ಲಿ ಶತ್ರುಗಳೇ ಇರಲಿಲ್ಲ. ಹೀಗಾಗಿ ಸದನ ಕಲಾಪಗಳನ್ನು ಸರಾಗವಾಗಿ ನಡೆಸುವಲ್ಲಿ ಅವರ ಕೊಡುಗೆ ಮಹತ್ವದ್ದಾಗಿತ್ತು. ಈ ಕಾರಣದಿಂದ ಅವರು ಪ್ರಧಾನಿಗೆ ಆಪ್ತರಾಗುತ್ತಾ ಹೋದರು ಮತ್ತು ಕೊನೆಯ ಎರಡು-ಮೂರು ವರ್ಷಗಳಲ್ಲಿ ಮೋದಿಯವರ ಸುತ್ತ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದರು.

ಅನಂತಕುಮಾರ ಅವರು ಸರ್ಕಾರ ಅಥವಾ ಅಧಿಕಾರ ಕೇಂದ್ರಿತ ರಾಜಕಾರಣ ಮಾಡಿದವರಲ್ಲ. ಮೂಲತಃ ಅವರು ಸಂಘ ಪರಿವಾರದ ಸಂಘಟನೆಯ ಮನುಷ್ಯ. ಅದ್ಭುತ ಸಂಘಟನಾಕಾರ, ತಂತ್ರಗಾರಿಕೆ ರೂಪಿಸುವುದರಲ್ಲಿ ಚತುರ ಮತ್ತು ನೀತಿ ನಿರೂಪಣೆಯಲ್ಲಿ ನಿಷ್ಣಾತರು. 1987 ರಿಂದ ಕೊನೆಯವರೆಗೆ ಅನಂತಕುಮಾರ ಅವರ ತಂತ್ರಗಾರಿಕೆ ಕೆಲಸ ಮಾಡಿದೆ. ಎಲ್ಲಾ ಚುನಾವಣೆಗಳಲ್ಲೂ ಅವರ ಪಟ್ಟುಗಳು, ಘೋಷಣೆಗಳು, ಲೆಕ್ಕಾಚಾರಗಳು ಮತ್ತು ಸೂತ್ರಗಳೇ ಬುನಾದಿಯಾಗಿದ್ದವು. ಯಡಿಯೂರಪ್ಪನವರು ಮುಖ್ಯಮಂತ್ರಿ ಆಗುವವರೆಗೆ ಅನಂತಕುಮಾರ ಅವರೇ ಪ್ರಮುಖ ಫಂಡ್ ಮೊಬಿಲೈಸರ್ ಆಗಿದ್ದರು. ಕರ್ನಾಟಕದಲ್ಲಿ ಬಿಜೆಪಿಯನ್ನು ಕಟ್ಟಿದ ಪ್ರಮುಖ ನಾಯಕರೆಂದರೆ ಯಡಿಯೂರಪ್ಪ ಮತ್ತು ಅನಂತಕುಮಾರ.

ಬೆಂಗಳೂರಿನಿಂದ ಕೆಲವು ಬಸ್ಸುಗಳಲ್ಲಿ ರಾತ್ರಿ ಪ್ರಯಾಣಿಸಿ ಮರುದಿನ ಸಂಜೆಯೊಳಗೆ ಬೀದರ್ ತಲುಪಿ, ಅಲ್ಲಿ ಕಾರ್ಯಕರ್ತರ ಸ್ಕೂಟರ್‌ಗಳಲ್ಲಿ ಊರೂರು ಅಲೆದು, ಅವರ ಮನೆಗಳಲ್ಲೇ ವಾಸ್ತವ್ಯ ಮಾಡಿ ರಾಜ್ಯದಲ್ಲಿ ಪಕ್ಷ ಸಂಘಟನೆ ಮಾಡಿ, ಬೇರು ಮಟ್ಟದಿಂದ ಪಕ್ಷವನ್ನು ಕಟ್ಟಿದವರು. ಅನಂತಕುಮಾರ ಅವರ ಚಾಕಚಕ್ಯತೆ, ಕ್ರಿಯಾಶೀಲತೆ ಮತ್ತು ಬುದ್ಧಿವಂತಿಕೆಯನ್ನು ಕಂಡು ಯಡಿಯೂರಪ್ಪನವರು ಅವರನ್ನು ತಮ್ಮ ಮನೆಯಲ್ಲೇ ಉಳಿಸಿಕೊಂಡಿದ್ದರು. ತೇಜಸ್ವಿನಿಯವರನ್ನು ವಿವಾಹವಾದ ನಂತರವೂ ಅನಂತಕುಮಾರ ಕೆಲವು ತಿಂಗಳುಗಳ ಕಾಲ ಯಡಿಯೂರಪ್ಪನವರ ಮನೆಯಲ್ಲಿಯೇ ವಾಸವಾಗಿದ್ದರು. ಇದು ಅವರಿಬ್ಬರ ಆಪ್ತ ಸಂಬಂಧಕ್ಕೆ ಹಿಡಿದ ಕೈಗನ್ನಡಿ. ಆಗ ಇವರಿಬ್ಬರನ್ನು ಕರ್ನಾಟಕ ಬಿಜೆಪಿಯ ಅಟಲ್-ಅಡ್ವಾಣಿ, ರಾಮ-ಲಕ್ಷ್ಮಣ, ಲವ-ಕುಶ ಎಂದೆಲ್ಲ ಕರೆಯುತ್ತಿದ್ದರು.



ಕೇಂದ್ರದಲ್ಲಿ ವಾಜಪೇಯಿ ಅವರ ಮುಖ ಮತ್ತು ಮುಂದಾಳತ್ವ ಹಾಗೂ ಅಡ್ವಾಣಿ ಅವರ ತಂತ್ರಗಾರಿಕೆಯಂತೆ, ಕರ್ನಾಟಕದಲ್ಲಿ ಯಡಿಯೂರಪ್ಪ ಮತ್ತು ಅನಂತಕುಮಾರ ಅವರ ಜೋಡಿ!

ನಾಲ್ಕು ಜನ ಕುಳಿತಾಗ ಸಂಪೂರ್ಣ ಗಮನವನ್ನು ತನ್ನತ್ತ ಸೆಳೆಯುವ ಮತ್ತು ಆ ಗಮನವನ್ನು ಬಹುಕಾಲ ಹಿಡಿದಿಟ್ಟುಕೊಳ್ಳುವ ಅಪರೂಪದ ಕಲೆ ಅನಂತಕುಮಾರ ಅವರಿಗೆ ಸಹಜವಾಗಿ ಸಿದ್ಧಿಸಿತ್ತು. ಅಲ್ಲದೆ ಅವರು ಪ್ರಯತ್ನಪೂರ್ವಕವಾಗಿ ಈ ಕಲೆಗಾರಿಕೆಯನ್ನು ನಿರಂತರವಾಗಿ ಹದಗೊಳಿಸುತ್ತಾ ಮತ್ತು ನುಣುಪುಗೊಳಿಸುತ್ತಾ ಬಂದರು. ಕೇಂದ್ರದಲ್ಲಿ ವಾಜಪೇಯಿ ಅಥವಾ ಅಡ್ವಾಣಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿದ್ದಾಗ, ರಾಜ್ಯ ಬಿಜೆಪಿ ಪ್ರಮುಖ ನಾಯಕರನ್ನು ಸಂಪರ್ಕಿಸಲು ಬಯಸಿದರೆ, ಇಲ್ಲಿನವರಿಗೆ ಭಾಷಾ ಸಮಸ್ಯೆ. ಆಗ ಅದನ್ನು ನಿಭಾಯಿಸುತ್ತಿದ್ದದ್ದು ಅನಂತಕುಮಾರ. ಉಳಿದವರಿಗೆ ಇಂಗ್ಲಿಷ್ ಮತ್ತು ಹಿಂದಿ ಅಷ್ಟಕಷ್ಟೆ, ಆದರೆ ಈ ಎರಡೂ ಭಾಷೆಗಳಲ್ಲಿ (ಜತೆಗೆ ತೆಲುಗು, ಮರಾಠಿ) ಅವರು ನಿರರ್ಗಳವಾಗಿ ಮಾತನಾಡಬಲ್ಲವರಾಗಿದ್ದರು. ದಿಲ್ಲಿ ನಾಯಕರ ಅಂತರಂಗವನ್ನು ಬಹುಬೇಗ ಪ್ರವೇಶಿಸಲು ಇದೂ ಒಂದು ಪ್ರಮುಖ ಕಾರಣವಾಗಿತ್ತು. ಅಡ್ವಾಣಿ ಅವರ ರಾಮಜನ್ಮಭೂಮಿ ಹೋರಾಟದಲ್ಲಿ ಅವರ ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡಿದವರು ಅನಂತಕುಮಾರ.

ಕಳೆದ ಒಂದೂವರೆ ದಶಕದಿಂದ ಬಿಜೆಪಿಯ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ರಾಷ್ಟ್ರೀಯ ಸಂಸದೀಯ ಮಂಡಳಿಯ ಸದಸ್ಯರಾಗಿ ಕೊನೆಯವರೆಗೂ ಮುಂದುವರಿದಿದ್ದು, ಪಕ್ಷದಲ್ಲಿ ಅವರ ಸ್ಥಾನಮಾನ ಎಷ್ಟಿತ್ತು ಎಂಬುದಕ್ಕೆ ನಿದರ್ಶನ. ಕರ್ನಾಟಕದ ಯಾವ ರಾಜಕಾರಣಿಯೂ ದಿಲ್ಲಿಯಲ್ಲಿ ಅನಂತಕುಮಾರ ಅವರಷ್ಟು ತಾಳಿಕೆ-ಬಾಳಿಕೆ ಬಂದಿಲ್ಲ.

ವಿದ್ಯಾರ್ಥಿ ದಿಸೆಯಲ್ಲೇ ಭವಿಷ್ಯದ ನಾಯಕ ಎಂಬ ಭರವಸೆ ಮೂಡಿಸಿದ್ದ ಅನಂತಕುಮಾರ ಅವರ ಮುಂದಾಳತ್ವಕ್ಕೆ ಮೆರುಗು ನೀಡಿದ್ದು 'ಅಸ್ಸಾಂ ಉಳಿಸಿ' ಎಂಬ ದೇಶವ್ಯಾಪಿ ವಿದ್ಯಾರ್ಥಿ ಆಂದೋಲನ. ಇದರಲ್ಲಿ ಭಾಗವಹಿಸಿದ ಕರ್ನಾಟಕದ ವಿದ್ಯಾರ್ಥಿಗಳಿಗೆ ಅನಂತಕುಮಾರ ಅವರೇ ನಾಯಕರು. ಈ ಚಳವಳಿ ಮುಂದೆ ವಿದ್ಯಾರ್ಥಿ ನಾಯಕರಾದ ಪ್ರಫುಲ್ಲ ಮಹಾಂತ ಮುಖ್ಯಮಂತ್ರಿಯಾಗುವುದರಲ್ಲಿ ಕೊನೆಗೊಂಡಿತು. ಈ ಚಳವಳಿಯಲ್ಲಿ ಅನಂತಕುಮಾರ ಜೊತೆಗೆ ಅಸ್ಸಾಂಗೆ ನಾನೂ ಹೋಗಿದ್ದೆ. ಹೋರಾಟದಲ್ಲಿ ಪಾಲ್ಗೊಂಡಿದ್ದೆ. ಈ ಹೋರಾಟಕ್ಕೆ ಅನಂತಕುಮಾರ ಅವರು ನೀಡಿದ ನಾಯಕತ್ವ ರಾಷ್ಟ್ರವ್ಯಾಪಿ ಪ್ರಶಂಸೆಗೆ ಪಾತ್ರವಾಯಿತು.

ಅಸ್ಸಾಂನಿಂದ ಬಂದ ನಂತರ, ಅನಂತಕುಮಾರ ಅವರೊಂದಿಗಿನ ಒಡನಾಟ ಗಾಢವಾಗುತ್ತಾ ಹೋಯಿತು. ನಂತರ ಅವರು ಎಬಿವಿಪಿ ರಾಜ್ಯ ಪ್ರಧಾನ ಕಾರ್ಯದರ್ಶಿ, ಸಂಘಟನಾ ಕಾರ್ಯದರ್ಶಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾದರು. ಬಿಜೆಪಿ ಸೇರಿದರು. ಕಾರ್ಯದರ್ಶಿಯಾದರು. ಬಿಜೆಪಿ ಯುವ ಮೋರ್ಚಾ ಅಧ್ಯಕ್ಷರಾದರು. ಪ್ರಧಾನ ಕಾರ್ಯದರ್ಶಿಯಾದರು. ಅವರು ಬಿಜೆಪಿ ಸೇರಿದ ನಂತರ ಒಡನಾಟ ಕಡಿಮೆಯಾಯಿತು. ಆದರೆ ಸಂಪರ್ಕ ಹಾಗೆಯೇ ಇತ್ತು. ಒಮ್ಮೆ ಪರಿಚಯವಾದರೆ ಅವರು ಯಾರನ್ನೂ ಮರೆಯುವವರಲ್ಲ.

ಅನಂತಕುಮಾರ ಅವರು ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಯುವಜನ ಸೇವೆ ಸಚಿವರಾಗಿದ್ದಾಗ, ನಾನು ಏಷಿಯನ್ ಕಾಲೇಜ್ ಆಫ್ ಜರ್ನಲಿಸಂನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿದ್ದೆ. ಒಂದು ದಿನ ಸ್ವತಃ ಅವರೇ ಫೋನ್ ಮಾಡಿ, ತಮ್ಮ ವಿಶೇಷ ಕರ್ತವ್ಯ ಅಧಿಕಾರಿಯಾಗಿ ಆಪ್ತ ಬಳಗ ಸೇರುವಂತೆ ಕೇಳಿಕೊಂಡರು. ಅದಕ್ಕೆ ನಾನು 'ಹೂಂ' ಎಂದೆ. ಮುಂದಿನ ಮೂರು ವರ್ಷಗಳ ಕಾಲ ಅವರೊಂದಿಗೆ ದೇಶವ್ಯಾಪಿ ಸಂಚರಿಸುವ, ಅವರೊಂದಿಗೆ ಪ್ರವಾಸ ಮಾಡುವ ಅಪರೂಪದ ಅವಕಾಶ ಸಿಕ್ಕಿತು. ಇದು ನನ್ನ ಜೀವನದ ಅಮೂಲ್ಯ ಘಳಿಗೆ ಅಥವಾ ಮೈಲುಗಲ್ಲುಗಳಲ್ಲೊಂದು. ನನಗೆ 'ಕೇಂದ್ರ ಸರಕಾರ'ವನ್ನು ಹತ್ತಿರದಿಂದ ತೋರಿಸಿದ್ದೇ ಅವರು. ಅವರ ಸಾಮೀಪ್ಯದಿಂದ ಅಸಂಖ್ಯ ಜನರನ್ನು ಭೇಟಿಯಾಗುವ ಅವಕಾಶ ಲಭಿಸಿತು.

ಪುಟ 5 ಮುಂದುವರಿದಿದೆ

ಪುಟ 4 ರಿಂದ

ಅನಂತಕುಮಾರ ಎಲ್ಲಾ ವಿಷಯಗಳಲ್ಲೂ ಆಸಕ್ತಿ ಬೆಳೆಸಿಕೊಂಡಿದ್ದರು. ಸಾಹಿತ್ಯ, ರಾಜಕೀಯ, ಅಂತರರಾಷ್ಟ್ರೀಯ ವ್ಯವಹಾರ, ಕಾನೂನು, ಸಾರ್ವಜನಿಕ ವ್ಯವಹಾರ ಹೀಗೆ ಎಲ್ಲಾ ವಿಷಯಗಳಲ್ಲೂ ಅವರಿಗೆ ಆಸಕ್ತಿ ಇತ್ತು. ಯಾವುದೇ ಕ್ಷೇತ್ರದ ಪರಿಣತರನ್ನು ಭೇಟಿ ಮಾಡಿದರೂ, ಅವರೇ ತಲೆದೂಗುವಂತೆ ಮಾತುಕತೆಗೆ ತೊಡಗುತ್ತಿದ್ದರು. ಅಂಥ ಚಾಕಚಕ್ಯತೆ ಮತ್ತು ಸಾಮರ್ಥ್ಯ ಅವರಲ್ಲಿತ್ತು. ಅವರು ಅದ್ಭುತ ಹರಟೆಕೋರರಾಗಿದ್ದರು. ಅವರ ಮಾತುಗಳನ್ನು ಕೇಳುತ್ತಾ ಕುಳಿತರೆ ಸ್ವಲ್ಪವೂ ಬೇಸರವಾಗುತ್ತಿರಲಿಲ್ಲ. ಹಾಸ್ಯ, ತಮಾಷೆಯ ಪ್ರಸಂಗಗಳು, ವೃತ್ತಾಂತಗಳು, ಕತೆಗಳು ಮತ್ತು ಉಪಕತೆಗಳ ಮೂಲಕ ರಂಜಿಸುತ್ತಿದ್ದರು. ಅವರ ಜೊತೆ ಒಂದು ಗಂಟೆ ಕಳೆದರೆ ಒಂದು ಪುಸ್ತಕ ಓದಿದಷ್ಟು ಆನಂದ ಸಿಗುತ್ತಿತ್ತು. ಅವರ ವಿಷಯ ಜ್ಞಾನ, ವ್ಯಾಪ್ತಿ ಮತ್ತು ಹರವು ಕೂಡ ಅಸಾಮಾನ್ಯವಾಗಿತ್ತು.

ಒಮ್ಮೆ ಒಂದು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅನಂತಕುಮಾರ ಜೊತೆಗೆ ಚಿಕ್ಕಮಗಳೂರಿಗೆ ಹೋಗಿ ವಾಪಸ್ ಬಂದೆ. ಅವರು ದಾರಿಯುದ್ದಕ್ಕೂ ಬೀಚಿ ಅವರ ಜೋಕುಗಳನ್ನು ಹೇಳಿ ನಗಿಸಿದ್ದರು. ಮತ್ತೊಮ್ಮೆ ಶಿವಮೊಗ್ಗಕ್ಕೆ ಕಾರಿನಲ್ಲಿ ಹೋಗುವಾಗ ಬಿಜೆಪಿ ನಾಯಕ ಜಗನ್ನಾಥರಾವ್ ಜೋಶಿ ಅವರ ರಸವತ್ತಾದ ಹಾಸ್ಯ ಪ್ರಸಂಗಗಳನ್ನು ಹೇಳಿದ್ದರು. ಕೇಳಬೇಕೆಂದಿಲ್ಲದಿದ್ದರೂ ಜೋಶಿಯವರ ನೂರಾರು ತಮಾಷೆಯ ಘಟನೆಗಳನ್ನು ಸರಪಟಾಕಿಗೆ ಬೆಂಕಿ ತಗುಲಿಸಿದಂತೆ ಹೇಳಿದ್ದರು. ಅನಂತಕುಮಾರ ಅವರ ಸ್ಮರಣಶಕ್ತಿ ಅದ್ಭುತವಾದುದು ಅಂದರೆ ಏನೂ ಹೇಳಿದಂತಾಗಲಿಲ್ಲ. ಬೇರೆ ಬೇರೆ ಕಾಲಘಟ್ಟಗಳಲ್ಲಿ ಅವರು ಐದು ಸಾವಿರ ಜನರನ್ನು ಭೇಟಿ ಮಾಡಿ ಪರಿಚಯಿಸಿಕೊಂಡಿದ್ದರೆನ್ನಿ. ಆ ಎಲ್ಲಾ ಐದು ಸಾವಿರ ಜನರು ಒಂದೇ ಸಭೆಯಲ್ಲಿ ಮುಖಾಮುಖಿಯಾದರೆ ಅನಂತಕುಮಾರ ಆ ಎಲ್ಲರ ಹೆಸರು, ಅವರ ಪತ್ನಿಯ ಹೆಸರು ಮತ್ತು ಅವರ ಮಕ್ಕಳ ಹೆಸರು ಹೇಳಿ ವಿಚಾರಿಸದಿದ್ದರೆ ಕೇಳಿ. ಅನಂತಕುಮಾರ ಅವರಿಗೆ ಅಸಾಧಾರಣ ಪ್ರಸ್ತುತಿ ಕಲೆ (Presentation Skill) ಸಿದ್ಧಿಸಿತ್ತು. ವಿಷಯವನ್ನು ಸೆಳೆದುಕೊಂಡು ಅದನ್ನು ಮರುಸಾದರಪಡಿಸುವಿಕೆಯಲ್ಲಿ ಅವರದು ಎತ್ತಿದ ಕೈ. ಪ್ರಧಾನಿಯಂಥ ಗಣ್ಯರ ಮುಂದೆ ನಿಯೋಗವನ್ನೋ ಅಥವಾ ಒಂದಿಬ್ಬರು ವ್ಯಕ್ತಿಗಳನ್ನೋ ಕರೆದುಕೊಂಡು ಹೋದಾಗ, ಅವರ ಮುಂದೆ ವಿಷಯವನ್ನು ಪರಿಣಾಮಕಾರಿಯಾಗಿ ಮಂಡಿಸುವುದರಲ್ಲಿ ಅವರನ್ನು ಮೀರಿಸುವವರಿರಲಿಲ್ಲ.

ಮುಂದೆ ಕುಳಿತ ಪ್ರಧಾನಿ ಅಥವಾ ಇತರ ಗಣ್ಯರ ಮನಸ್ಥಿತಿಯನ್ನು ನೋಡಿಕೊಂಡು ಬಹಳ ಸೊಗಸಾಗಿ ವಿಷಯವನ್ನು ನಿವೇದಿಸುತ್ತಿದ್ದರು.



ಒಮ್ಮೆ ನಾವು ಅರಸೀಕೆರೆಯಲ್ಲಿ ತರಳಬಾಳು ಹುಣ್ಣಿಮೆ ಕಾರ್ಯಕ್ರಮ ಮುಗಿಸಿ ಬೆಂಗಳೂರಿಗೆ ಕಾರಿನಲ್ಲಿ ವಾಪಸ್ ಬರುತ್ತಿದ್ದೆವು. ರಾತ್ರಿ ಹತ್ತು ಗಂಟೆಯಾಗಿರಬಹುದು. ಪ್ರಧಾನಿ ಅವರ ಫೋನ್ ಬಂದಿತು. ಅತ್ತ ಕಡೆಯಿಂದ ವಾಜಪೇಯಿ ಮಾತನಾಡುತ್ತಿದ್ದರು. ಡ್ರೈವರ್‌ಗೆ ರಸ್ತೆಬದಿಗೆ ಕಾರು ನಿಲ್ಲಿಸುವಂತೆ ಅನಂತಕುಮಾರ ಹೇಳಿದರು. ಕೃಷ್ಣಾ ನದಿ ನೀರು ಹಂಚಿಕೆ ವಿವಾದದ ಬಗ್ಗೆ ಪ್ರಧಾನಿ ಕೇಳಿದರು. ಮುಂದಿನ ಇಪ್ಪತ್ತು ನಿಮಿಷಗಳ ಕಾಲ ಅನಂತಕುಮಾರ ಸ್ವಲ್ಪವೂ ಗೊಂದಲವಿಲ್ಲದೆ ಇಡೀ ವಿವಾದದ ಎಲ್ಲಾ ಮಗ್ಗುಲುಗಳನ್ನು ಹರವಿಟ್ಟಿದ್ದರು. ಕರ್ನಾಟಕದ ನಿಲುವೇನು, ಆಂಧ್ರದ ನಿಲುವೇನು, ಅಣೆಕಟ್ಟಿನ ಎತ್ತರ, ನೀರಿನ ಒಳಹರಿವು, ಬಚಾವತ್ ಆಯೋಗದ ಮುಂದಿರುವ ದಾರಿ, ಕೇಂದ್ರ ತಳೆಯಬಹುದಾದ ಮಾರ್ಗ... ಹೀಗೆ ಎಲ್ಲವನ್ನೂ ಎಳೆಎಳೆಯಾಗಿ ಬಿಡಿಸಿಟ್ಟರು. ವಾಜಪೇಯಿ ಸುಮ್ಮನೆ ಕೇಳುತ್ತಿದ್ದರು. ಪ್ರಾಯಶಃ ಅಷ್ಟು ಕಡಿಮೆ ಅವಧಿಯಲ್ಲಿ ಆ ವಿವಾದವನ್ನು ಅಷ್ಟೊಂದು ನಿಖರವಾಗಿ ಹೇಳಲು ಸಾಧ್ಯವೇ ಇರಲಿಲ್ಲ.

ಅನಂತಕುಮಾರ ಅವರ ವ್ಯಕ್ತಿತ್ವದಲ್ಲಿ ಅವರ ಪತ್ನಿ ತೇಜಸ್ವಿನಿ ಅವರ ಪಾತ್ರ ದೊಡ್ಡದು. ಕುಟುಂಬದ ಯಾವುದೇ ಕಾರಣಗಳು ಅವರ ರಾಜಕೀಯ ಜೀವನಕ್ಕೆ ಅಡ್ಡಿಯಾಗಲಿಲ್ಲ. ನಿಸ್ಪೃಹ ಸಾಮಾಜಿಕ ಸೇವೆಯ ಮೂಲಕ ತೇಜಸ್ವಿನಿ ಅವರು ಪರೋಕ್ಷವಾಗಿ ಅನಂತಕುಮಾರ ಅವರ ಗೆಲುವಿಗೆ ಕಾರಣರಾಗಿದ್ದರು. ಅನಂತಕುಮಾರ ಅವರ ರಾಜಕೀಯ ಸಾಧನೆಯಲ್ಲಿ ಪತ್ನಿಯ ತ್ಯಾಗ, ಪರಿಶ್ರಮ, ಉತ್ತೇಜನ ಮತ್ತು ನಿರಂತರ ಬೆಂಬಲವಿದೆ. ಪತ್ನಿ ಮಾಡಿದ ಪುಣ್ಯದ ಫಲ ಅವರಿಗೆ ವರವಾಗಿ ಪರಿಣಮಿಸಿದ್ದು ಸುಳ್ಳಲ್ಲ. ಹಾಗೆ ನೋಡಿದರೆ, ಅನಂತಕುಮಾರ ಅವರ 'ನಿಜವಾದ ಆಟ' ಇನ್ನು ಮೇಲೆ ಆರಂಭವಾಗಬೇಕಿತ್ತು. His best was yet to come. ಕರ್ನಾಟಕ ರಾಜಕಾರಣ ಅವರಿಗೆ ಅಧಿಕಾರ ಕೊಟ್ಟು ಪರೀಕ್ಷಿಸದೆ ಬರಿಗೈಲಿ ಕಳುಹಿಸಿದ್ದು ಇತಿಹಾಸದ ಮರೆಯಲಾಗದ ಘಟನೆಯಾಗಿಯೇ ನಮ್ಮನ್ನು ಸದಾ ಕಾಡಲಿದೆ. I miss him. Always. -

**(ಅನಂತಕುಮಾರ್ ಅವರು ನಿಧನರಾದ ಸಂದರ್ಭದಲ್ಲಿ ವಿಶ್ವವಾಣಿ ಪತ್ರಿಕೆಯಲ್ಲಿ ಪ್ರಕಟವಾದ ಬರೆಹ)**

ಪುಟ 3 ರಿಂದ

## ಹಾಲು ಕೊಟ್ಟು ಪುರಸ್ಕರಿಸಿದ ತಾಯಿ

ಪೋಷಕರೆಲ್ಲ ಪೋಲೀಸ್ ಅಧಿಕಾರಿಗಳೊಡನೆ ತಮ್ಮ ಮಕ್ಕಳನ್ನು ಬಿಟ್ಟುಬಿಡುವಂತೆ ಒತ್ತಾಯಿಸತೊಡಗಿದರು. "ಈ ಹುಡುಗರು ಏನೋ ತಪ್ಪು ಮಾಡಿದ್ದಾರೆ, ತಪ್ಪಾಗಿದೆ, ನಿಜ. ದಯವಿಟ್ಟು ಅದನ್ನು ಮುಂದುವರಿಸದೆ ಬಿಟ್ಟುಬಿಡಿ" ಎಂದು ಮನವಿ ಮಾಡಿಕೊಂಡರು.

ಪೋಲೀಸರೂ ಅವರ ಮನವಿಯನ್ನು ಒಪ್ಪುವಂತೆ ಕಂಡುಬಂದಿತು. ಆದರೆ ಈ ಸತ್ಯಾಗ್ರಹಿಗಳ ಬಳಗ ಸುಮ್ಮನಿರಬೇಕಲ್ಲ! " ನಾವೇನೂ ತಪ್ಪು ಮಾಡಿಲ್ಲ, ನಾವು ಬರುವುದೂ ಇಲ್ಲ " ಎಂದು ಹಠಹಿಡಿದವರಂತೆ ತಮ್ಮ ಪೋಷಕರಿಗೇ ಹೇಳಿಬಿಟ್ಟರು. ಪೋಲೀಸರು, "ನೀವು ತಪ್ಪೊಪ್ಪಿಕೊಂಡರೆ ವಾರ್ನಿಂಗ್ ಕೊಟ್ಟು ಬಿಟ್ಟುಬಿಡುತ್ತೇವೆ, ಇಲ್ಲದಿದ್ದರೆ ಜೈಲಿಗೆ ಕಳುಹಿಸುತ್ತೇವೆ, ಎಚ್ಚರ" ಎಂದು ಬೆದರಿಸುತ್ತಿದ್ದಂತೆಯೇ ಎಲ್ಲ ಹುಡುಗರೂ "ನಾವು ಬಂದಿರೋದೇ ಜೈಲಿಗೆ ಹೋಗೋದಿಕ್ಕೆ" ಎಂದು ಜೋರಾಗಿ ಘೋಷಣೆ ಕೂಗತೊಡಗಿದರು. 'ಇಂಥವರನ್ನು ಹ್ಯಾಂಗ್ರೀ ಬಿಟ್ಟು ಕಳುಹಿಸೋದು' ಎಂದು ಪೋಲೀಸರೂ, ಮಕ್ಕಳನ್ನು ಕಳುಹಿಸಿಕೊಡುವಂತೆ ಪೋಷಕರೂ, ತಾವು ಜೈಲಿಗೇ ಹೋಗುವವರೆಂದು ಸತ್ಯಾಗ್ರಹಿಗಳೂ ಪರಸ್ಪರ ವಿರುದ್ಧವಾದ ಮೂರು ದಿಕ್ಕುಗಳಲ್ಲಿ ವಾದಿಸತೊಡಗಿದ್ದರು.

ಸ್ಥಳೀಯ ವಿಧಾನಸಭಾ ಸದಸ್ಯರನ್ನು ಕರೆಯಿಸಿ ಸಮಸ್ಯೆ ಬಗೆಹರಿಸಬೇಕೆಂದು ಪೋಷಕರು ಚರ್ಚಿಸುತ್ತಿದ್ದರೆ, ಪೋಲೀಸರು ಎಫ್.ಐ.ಆರ್. ಸಿದ್ಧಪಡಿಸುವ ಬಗೆಗೆ ತಲೆಕೆಡಿಸಿಕೊಳ್ಳುತ್ತಿದ್ದರು. ತಾವೇನೇ ಘೋಷಣೆ ಕೂಗಿದರೂ ಪೋಲೀಸರು ತಮ್ಮನ್ನೇನೂ ಶಿಕ್ಷಿಸಲಿಕ್ಕಿಲ್ಲವೆಂಬ ಧೈರ್ಯದಿಂದ ಹುಡುಗರು ನಿಶ್ಚಿಂತೆಯಾಗಿದ್ದರು. ಅವರಿಗಿಂತ ಮೊದಲು ಸತ್ಯಾಗ್ರಹ ಹೂಡಿ ಜೈಲು ಸೇರಿದ್ದವರು ಇಬ್ಬರೇ. ಅವರಲ್ಲೊಬ್ಬ ವಾದೀಂದ್ರ ಆಚಾರ್ಯ. ಯಾವುದೋ ಸ್ಟೇಶನ್ನಿನಲ್ಲಿ ಹಿಂಸಾಪ್ರಿಯನಾದ ಪೋಲಿಸ್ ಅಧಿಕಾರಿಯೊಬ್ಬ ಆ ಮುಗ್ಧ ಹುಡುಗ ವಾದೀಂದ್ರನಿಗೆ ಏರೋಪ್ಲೇನ್ ಹತ್ತಿಸುವುದರಿಂದ ಹಿಡಿದು ಕೊಡಬಾರದ ಕಷ್ಟಗಳನ್ನೆಲ್ಲ ಕೊಟ್ಟಿದ್ದ. ಈ ಸಲದ ಗುಂಪು ದೊಡ್ಡದಿತ್ತು. ಹೀಗಾಗಿ, ಪೋಲೀಸರೇನೂ ಹೊಡೆದು ಬಡಿದು ಮಾಡಲಿಕ್ಕಿಲ್ಲ ಎಂಬ ಧೈರ್ಯವೂ ಇದ್ದಿತು.

ಆ ದಿನವಂತೂ ತಮ್ಮ ಮಕ್ಕಳನ್ನು ಪೋಲೀಸರು ಬಿಡಲಿಕ್ಕಿಲ್ಲವೆಂದು ಅರಿವಾದ ಮೇಲೆ ಹುಡುಗರ ಪೋಷಕರಿಗೆ ಮನೆಗೆ ಹಿಂತಿರುಗದೆ ಗತ್ಯಂತರವಿರಲಿಲ್ಲ. ಅನಂತಕುಮಾರನ ತಾಯಿಯವರೊಬ್ಬರನ್ನು ಹೊರತುಪಡಿಸಿ ಉಳಿದವರೆಲ್ಲ ಬಹು ದುಗುಡದಿಂದಲೇ ಮನೆಗೆ ಮರಳಬೇಕಾಯಿತು. ಇತ್ತ ಸತ್ಯಾಗ್ರಹಿಗಳು ಸೆರೆಮನೆ ತಲುಪುವ ಹೊತ್ತಿಗೆ ರಾತ್ರಿ ಹತ್ತು ಗಂಟೆ.

### *ಸಮಾಜ ಸೇವೆಗೆ ಪರ್ಯಾಯ -ತೇಜಸ್ವಿನಿ ಅನಂತಕುಮಾರ್*




*ಏಷ್ಯಾನೆಟ್ ಸುವರ್ಣ ನ್ಯೂಸ್‌ಗೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ನೀಡಿರುವ ಎಕ್ಸ್‌ಕ್ಲೂಸಿವ್ ಪಾಡ್‌ಕಾಸ್ಟ್ ಇದೀಗ ಲಭ್ಯವಿದೆ. ಪೂರ್ಣ ಪಾಡ್‌ಕಾಸ್ಟ್ ವೀಕ್ಷಿಸಲು ಈ ಕೊಂಡಿಯನ್ನು ಬಳಸಿ: https://youtu.be/xDSnYB3Psus?si=BD-w6Gtoi1KmgVro*

# ಅದಮ್ಯ ಚೇತನದ ಅನಂತ ಪ್ಲೇಟ್ ಬ್ಯಾಂಕ್: ಪರಿಸರ ಸಂರಕ್ಷಣೆಯ ಹೊಸ ಅಲೆ






ಅದಮ್ಯ ಚೇತನ ಸಂಸ್ಥೆಯು ಪರಿಸರ ಸಂರಕ್ಷಣೆಯ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿ ಅನಂತ ಪ್ಲೇಟ್ ಬ್ಯಾಂಕ್ ಎಂಬ ವಿನೂತನ ಯೋಜನೆಯನ್ನು ಕರ್ನಾಟಕದ ಮೈಸೂರು ಮತ್ತು ಸಾಗರ, ಉತ್ತರಾಖಂಡ ರಾಜ್ಯದ ಡೆಹ್ರಾಡೂನ್ ಮತ್ತು ಉತ್ತರಪ್ರದೇಶದ ಅಯೋಧ್ಯಾ ಮುಂತಾದ ನಗರಗಳಿಗೆ ವಿಸ್ತರಿಸಿದೆ. ಈ ಉಪಕ್ರಮವು ಪ್ಲಾಸ್ಟಿಕ್ ಮುಕ್ತ ಭಾರತದ ಕನಸಿಗೆ ಹೊಸ ಭರವಸೆ ಮೂಡಿಸಿದೆ.

**ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಅನಂತ ಪ್ಲೇಟ್ ಬ್ಯಾಂಕ್:**

ಅದಮ್ಯ ಚೇತನ ಮತ್ತು GSS ಯೋಗ ಸಂಸ್ಥೆಯ ಸಹಯೋಗದಲ್ಲಿ ಮೈಸೂರಿನಲ್ಲಿ ಪ್ರಾರಂಭವಾದ ಅನಂತ ಪ್ಲೇಟ್ ಬ್ಯಾಂಕ್ ಯೋಜನೆಯನ್ನು ಮೈಸೂರು ಲೋಕಸಭಾ ಸಂಸದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ದಿನಾಂಕ ಏಪ್ರಿಲ್ 5, 2025ರಂದು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಯದುವೀರ ಕೃಷ್ಣದತ್ತ ಒಡೆಯರ್ ಅವರು ಅದಮ್ಯ ಚೇತನದ ಶೂನ್ಯ ತ್ಯಾಜ್ಯ ಅಡುಗೆಮನೆಯ ತಮ್ಮ ಹಿಂದಿನ ಭೇಟಿಯನ್ನು ಸ್ಮರಿಸಿಕೊಂಡು ಸಂಸ್ಥೆಯ ಪರಿಸರಪೂರಕ ಕಾರ್ಯಗಳನ್ನು ಶ್ಲಾಘಿಸಿದರು.

ಈ ಪ್ಲೇಟ್ ಬ್ಯಾಂಕ್ ಯೋಜನೆಯು 2000 ಮರುಬಳಕೆ ಮಾಡಬಹುದಾದ ತಟ್ಟೆಗಳು, ಲೋಟಗಳು ಹಾಗೂ ಚಮಚಗಳೊಂದಿಗೆ ಕಾರ್ಯಾರಂಭ ಮಾಡಿದ್ದು ಪ್ಲಾಸ್ಟಿಕ್ ಅಥವಾ ಏಕಬಳಕೆಯ ವಸ್ತುಗಳ ಬಳಕೆಯನ್ನು ತಗ್ಗಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿದೆ.

ಈ ಸಂದರ್ಭದಲ್ಲಿ ಅದಮ್ಯ ಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಪಿ ವಿ ಕೃಷ್ಣ ಭಟ್, ಪ್ರೊ. ಕೃಷ್ಣೇಗೌಡ, GSS ಸಂಸ್ಥೆಯ ಶ್ರೀಹರಿ, ಮಾಜಿ ಮೇಯರ್ ಶಿವಕುಮಾರ್, ಎಂಐಟಿ ಸಂಸ್ಥೆಯ ಮುರಳಿ ಅದಮ್ಯ ಚೇತನದ ಕಾರ್ಯಕರ್ತರು ಹಾಗೂ ಅನೇಕ ಗಣ್ಯರು ಉಪಸ್ಥಿತರಿದ್ದರು.



**ಡೆಹ್ರಾಡೂನ್‌ನಲ್ಲಿ ಅನಂತ ಪ್ಲೇಟ್ ಬ್ಯಾಂಕ್:**

ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ಅದಮ್ಯ ಚೇತನ ಮತ್ತು ನೇಚರ್ ಸೈನ್ಸ್ ಇನಿಶಿಯೇಟಿವ್ (NSI) ಸಹಯೋಗದೊಂದಿಗೆ ಅನಂತ ಪ್ಲೇಟ್ ಬ್ಯಾಂಕ್ ಸ್ಥಾಪನೆಯಾಗಿದ್ದು, 2025ರ ಮಾರ್ಚ್ 23 ರಂದು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಉದ್ಘಾಟನೆ ನೆರವೇರಿಸಿದರು. ಕರ್ನಾಟಕದ ಹೊರಗಿನ ಎರಡನೇ ಹಾಗೂ ಉತ್ತರಾಖಂಡದ ಮೊದಲ ಪ್ಲೇಟ್ ಬ್ಯಾಂಕ್ ಇದಾಗಿದ್ದು, ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವ ಮತ್ತು ಪರಿಸರ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ.

**ಸಾಗರದಲ್ಲಿ ಅನಂತ ಪ್ಲೇಟ್ ಬ್ಯಾಂಕ್:**

ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ವಜ್ರ ಮಹೋತ್ಸವದ ಅಂಗವಾಗಿ ಸಾಗರದ ಶ್ರೀ ಶಂಕರ ಮಠ ಮತ್ತು ಅದಮ್ಯ ಚೇತನದ ಸಹಯೋಗದಲ್ಲಿ ಏಪ್ರಿಲ್ 13ರಂದು ಅನಂತ ಪ್ಲೇಟ್ ಬ್ಯಾಂಕ್ ಉದ್ಘಾಟನೆಗೊಂಡಿತು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು 'ಹಸಿರು ಅಡುಗೆಮನೆ ಮತ್ತು ನಿಸರ್ಗ ರಕ್ಷಣೆ ಸಂವಾದ' ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಪರಿಸರವಾದಿ ಶ್ರೀ ಅನಂತ ಹೆಗಡೆ, ಬಿ ಆರ್ ಜಯಂತ್ ಸೇರಿದಂತೆ ಹಲವು ಗಣ್ಯರು ಈ ಸಂದರ್ಭದಲ್ಲಿ ಭಾಗವಹಿಸಿದ್ದರು.

**ರಾಮನ ನಗರಿಯಲ್ಲಿ ಅನಂತ ಪ್ಲೇಟ್ ಬ್ಯಾಂಕ್:**



ಈ ಮೊದಲು, ಶ್ರೀ ಅನಂತಕುಮಾರ್ ಅವರ ಆಶಯದಂತೆ ಪ್ರಾರಂಭವಾದ ಸಸ್ಯಾಗ್ರಹ ಕಾರ್ಯಕ್ರಮವನ್ನು ಅಯೋಧ್ಯಾ ನಗರಕ್ಕೂ ವಿಸ್ತರಿಸಿ ಸರಯೂ ನದಿಯ ತಟದಲ್ಲಿ 300 ಪವಿತ್ರ ಸೀತಾ ಅಶೋಕ ಗಿಡಗಳನ್ನು ನೆಡಲಾಗಿತ್ತು. ಅಯೋಧ್ಯೆಯಲ್ಲಿ ತನ್ನ ಪರಿಸರ ಸಂರಕ್ಷಣಾ ಕಾರ್ಯಗಳ ಮುಂದುವರಿಕೆಯಾಗಿ ಅದಮ್ಯ ಚೇತನ ಸಂಸ್ಥೆಯು ಏಪ್ರಿಲ್ 06, 2025ರ ರಾಮನವಮಿಯ ಪವಿತ್ರ ದಿನದಂದು ಅನಂತ ಪ್ಲೇಟ್ ಬ್ಯಾಂಕನ್ನು ಸ್ಥಾಪಿಸಿದೆ. ರಾಮಮಂದಿರ ನಿರ್ಮಾಣದ ಉಸ್ತುವಾರಿ ನೋಡಿಕೊಳ್ಳುತ್ತಿರುವ ವಿಶ್ವಹಿಂದೂ ಪರಿಷತ್ತಿನ ನಾಯಕರಾದ ಶ್ರೀ ಗೋಪಾಲ್ ಜಿ ಅವರು ಈ ಯೋಜನೆಯನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ತೇಜಸ್ವಿನಿ ಅನಂತಕುಮಾರ್ ಹಾಗೂ ಅದಮ್ಯ ಚೇತನದ ಟ್ರಸ್ಟಿಗಳಾದ ಶ್ರೀ ಸುಬ್ರಮಣ್ಯಂ ಮೊದಲಾದವರು ಉಪಸ್ಥಿತರಿದ್ದರು.

**ಪರಿಸರ ಸುಸ್ಥಿರತೆಗೆ ಜನಸಾಮಾನ್ಯರ ಸಹಕಾರ:**ಅನಂತ ಪ್ಲೇಟ್ ಬ್ಯಾಂಕ್ ಯೋಜನೆಯು ಈಗಾಗಲೇ ಸಾವಿರಾರು ಸಮಾರಂಭಗಳಲ್ಲಿ ಏಕಬಳಕೆಯ ಪ್ಲಾಸ್ಟಿಕ್ ಬಳಕೆಯನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಿದೆ. ಮರುಬಳಕೆಯ ಪಾತ್ರೆಗಳನ್ನು ಉತ್ತೇಜಿಸುವ ಈ ಯೋಜನೆಯು ಉಚಿತವಾಗಿದ್ದು ಪಾತ್ರೆಗಳನ್ನು ಪಡೆಯುವಾಗ ನೀಡಿದ ಭದ್ರತಾ ಠೇವಣಿಯನ್ನು ಪಾತ್ರೆಗಳನ್ನು ಹಿಂದಿರುಗಿಸಿದ ನಂತರ ಮರಳಿಸಲಾಗುತ್ತದೆ. ಅದಮ್ಯ ಚೇತನವು ಈ ಯೋಜನೆಯನ್ನು ಇನ್ನಷ್ಟು ನಗರಗಳಿಗೆ ವಿಸ್ತರಿಸುವ ಆಶಯ ಹೊಂದಿದೆ.



# ಅನಂತ ಹಸಿರು ಜೀವನ ಶೈಲಿ ಪರಿಕರ ಕೇಂದ್ರ



ಪರಿಸರ ಸ್ನೇಹಿ ಜೀವನ ಶೈಲಿಯನ್ನು ರೂಪಿಸಿಕೊಳ್ಳುವುದು ಇಂದು ನಮ್ಮೆಲ್ಲರ ಆದ್ಯತೆಯಾಗಬೇಕಿದೆ. ಜನರು ನಾನಾ ಕ್ಷೇತ್ರಗಳಲ್ಲಿ ಶೂನ್ಯತ್ಯಾಜ್ಯ ವ್ಯವಸ್ಥೆಯನ್ನು ಬಯಸುತ್ತಾರೆ. ಜೊತೆಗೆ, ಹಸಿರು ಜೀವನ ಶೈಲಿಯತ್ತಲೂ ಜನರ ಒಲವು ಹೆಚ್ಚಾಗುತ್ತಿದೆ. ಆದರೆ, ಜನರಿಗೆ ಸೂಕ್ತ ಮಾರ್ಗದರ್ಶನವನ್ನು ನೀಡುವ ಕೇಂದ್ರಗಳ ಕೊರತೆ ಕಂಡು ಬರುತ್ತದೆ. ಈ ಕೊರತೆಯನ್ನು ನೀಗಿಸಲು ಅದಮ್ಯ ಚೇತನ ಸಂಸ್ಥೆಯು "ಅನಂತ ಹಸಿರು ಜೀವನ ಶೈಲಿ ಪರಿಕರ ಕೇಂದ್ರ" ವನ್ನು ಪ್ರಾರಂಭಿಸಿದೆ. ಈ ಕೇಂದ್ರವು ಹಸಿರು ಜೀವನ ಶೈಲಿಯನ್ನು ಅಳವಡಿಸಿಕೊಳ್ಳಲು ಬೇಕಾದ ಅನೇಕ ಪ್ರಾಯೋಗಿಕ ಸಲಹೆಗಳನ್ನು ನೀಡುತ್ತದೆ. ಮರುಬಳಕೆಯಾಗುವ ತಟ್ಟೆ-ಲೋಟಗಳಿಂದ ಹಿಡಿದು, ರಾಸಾಯನಿಕ ಮುಕ್ತ ಮಾರುಕಟ್ಟೆ ಆಯ್ಕೆಗಳು, ಮರುಬಳಕೆ ತರಬೇತಿ, ಗ್ಯಾರೇಜ್ ಸೇಲ್, ಕಾಂಪೋಸ್ಟ್ ತಯಾರಿಕೆಗೆ ಮಾರ್ಗದರ್ಶನ, ಶೂನ್ಯ ತ್ಯಾಜ್ಯ ಸಮಾರಂಭಗಳ ಯೋಜನೆ, ಹಸಿರು ಕ್ಯಾಂಪಸ್ ಯೋಜನೆಗಳು ಮುಂತಾದ ವಿಷಯಗಳ ಬಗ್ಗೆ ಈ ಕೇಂದ್ರದಲ್ಲಿ ಮಾಹಿತಿ ದೊರೆಯುತ್ತದೆ. 'ತಿರಸ್ಕರಿಸಿ, ಕಡಿಮೆಮಾಡಿ, ಪುನಃ ಬಳಸಿ, ಮರುನಿರ್ಮಾಣ ಮಾಡಿ' ಎಂಬ ಧ್ಯೇಯವಾಕ್ಯವನ್ನು ಹೊಂದಿರುವ ಈ ಕೇಂದ್ರವು ಜನರಿಗೆ ತಮ್ಮ ವ್ಯಕ್ತಿಗತ ಬದುಕಿನ ಮೂಲಕ ಜವಾಬ್ದಾರಿಯುತ ಸಮಾಜದತ್ತ ಸಾಗಲು ನೆರವು ನೀಡುತ್ತದೆ.



**ಅನಂತ ಹಸಿರು ಜೀವನ ಶೈಲಿ ಪರಿಕರ ಕೇಂದ್ರದಲ್ಲಿ ಲಭ್ಯವಿರುವ ಸೇವೆಗಳು:**

1. ಸಮ್ಮೇಳನಗಳು, ಮದುವೆ ಮುಂತಾದ ಸಮಾರಂಭಗಳು ಮತ್ತು ಇತರ ಎಲ್ಲಾ ಕಾರ್ಯಕ್ರಮಗಳಲ್ಲಿ ಬಳಸಲು ಅಗತ್ಯವಾದ ತಟ್ಟೆ-ಲೋಟಗಳ ದೊಡ್ಡ ಸಂಗ್ರಹ – ಇವುಗಳನ್ನು ಬಳಸಿದ ನಂತರ ಹಿಂದಿರುಗಿಸಬಹುದು. ಈ ಸೇವೆ ಸಂಪೂರ್ಣ ಉಚಿತ.

2. ಮನೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯದಿಂದ ಗೊಬ್ಬರ ತಯಾರಿಸುವ ಮಾಹಿತಿಯನ್ನು ನೀಡಲು ನಿಯಮಿತ ಕಾರ್ಯಾಗಾರಗಳು ಹಾಗೂ ಬೆಂಬಲ ವ್ಯವಸ್ಥೆ.



3. ರಾಸಾಯನಿಕ ಮುಕ್ತ ಸಾಬೂನು/ಮಾರ್ಜಕಗಳ ತಯಾರಿ ಮತ್ತು ಬಳಕೆಯ ಮಾಹಿತಿ ನೀಡುವುದರ ಜೊತೆಗೆ ಪರಿಣತರಿಂದ ತರಬೇತಿ. ಶೌಚಾಲಯ ಸ್ವಚ್ಛತೆಯ ದ್ರಾವಣ, ಪಾತ್ರೆ ತೊಳೆಯುವ ದ್ರಾವಣ ಮತ್ತು ವಾಶಿಂಗ್ ಪೌಡರ್, ನೆಲ ತೊಳೆಯುವ ದ್ರಾವಣ ಇತ್ಯಾದಿಗಳ. ಮಾರಾಟದ ವ್ಯವಸ್ಥೆ.

4. ಮಹಿಳೆಯರ ಮಾಸಿಕ ಋತುಸಮಯದ ಸಮಸ್ಯೆಗಳಿಗೆ ಕಡಿಮೆ ವೆಚ್ಚದ, ಪರಿಸರಸ್ನೇಹಿ, ಮುಟ್ಟಿನ ಕಪ್ (menstrual cup) ಬಳಕೆಗೆ ಪ್ರೋತ್ಸಾಹ.

5. ಸಾರ್ವಜನಿಕ ಸ್ಥಳಗಳಲ್ಲಿ ಮರ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲು ಅಗತ್ಯವಾದ ಸ್ಥಳೀಯ ಸಸಿಗಳ ಸಂಗ್ರಹ




6. ಗ್ಯಾರೇಜ್ ಸೇಲ್ – ಹಳೆಯ ವಸ್ತುಗಳ ಖರೀದಿ ಮತ್ತು ಮಾರಾಟ ಮಾಡುವ ವ್ಯವಸ್ಥೆ.

7. ಮರುಸಂಸ್ಕರಣಾ ಕೇಂದ್ರ – ಹಾಳಾದ ಅಥವಾ ಎಸೆಯುವ ವಸ್ತುಗಳನ್ನು ತಂದು ದುರಸ್ತಿ, ಮರುನಿರ್ಮಾಣ ಮತ್ತು ಮರುಬಳಕೆ ಮಾಡುವ ವ್ಯವಸ್ಥೆ.

8. 'ತಿರಸ್ಕರಿಸಿ, ಕಡಿಮೆಮಾಡಿ, ಪುನಃ ಬಳಸಿ, ಮರುನಿರ್ಮಾಣ ಮಾಡಿ' ಎಂಬ ಧ್ಯೇಯಗಳಿಗೆ ಪೂರಕವಾಗಿ ನಿಯಮಿತ ಕಾರ್ಯಾಗಾರಗಳು ಮತ್ತು ಜಾಗೃತಿ ಕಾರ್ಯಕ್ರಮಗಳು.

9. ಶೂನ್ಯ ತ್ಯಾಜ್ಯ ಮನೆಗಳು, ದೇವಾಲಯಗಳು ಮತ್ತು ಕಚೇರಿಗಳನ್ನು ಸ್ಥಾಪಿಸಲು ಸಲಹೆ ಮತ್ತು ಬೆಂಬಲ.

10. ಪರಿಸರ ಸ್ನೇಹಿ, ಶೂನ್ಯ ತ್ಯಾಜ್ಯ ಕಾರ್ಯಕ್ರಮಗಳನ್ನು ರೂಪಿಸಲು ಸಲಹೆ ಮತ್ತು ಸಹಕಾರ




11. ಕಾಲೇಜು ಆವರಣಗಳಲ್ಲಿ. ಶೂನ್ಯ ತ್ಯಾಜ್ಯ ವ್ಯವಸ್ಥೆಯ ಜೊತೆಜೊತೆಗೆ ತ್ಯಾಜ್ಯಗಳಿಂದ ಪಳೆಯುಳಿಕೆ ಮುಕ್ತ ಇಂಧನದ ಉತ್ಪಾದನೆ, ನೀರಿನ ಮರುಬಳಕೆ, ಹಸಿರು ಪರಿಸರದ ಹೆಚ್ಚಳ, ಇಂಗಾಲದ ಹೊರಸೂಸುವಿಕೆಯ ಪ್ರಮಾಣದಲ್ಲಿ (net negative carbon emissions) ಇಳಿಕೆ ಮುಂತಾದ ವಿಷಯಗಳ ಬಗ್ಗೆ ಸಮಗ್ರ ಮಾಹಿತಿ ಮತ್ತು ಸಲಹೆ ನೀಡುವ ಮೂಲಕ ಹಸಿರು ಕಾಲೇಜು ಕ್ಯಾಂಪಸ್ಸುಗಳ ಅಭಿವೃದ್ಧಿ

ವ್ಯಕ್ತಿ ವಿಶೇಷ ಮಾಲಿಕೆ

# ಸದ್ಗುರು ಗಣಪತರಾವ್ ಮಹಾರಾಜರು

- ಕೆ. ಜನಾರ್ದನ ತುಂಗ

ಆದಿಗುರು ದತ್ತಾತ್ರೇಯರು ನಾಥ ಸಂಪ್ರದಾಯದ ಮೂಲಪುರುಷರು. ಮುಂದೆ ನವನಾಥರಿಂದ ಪ್ರಣೀತವಾದ ನಾಥ ಪರಂಪರೆಯ ಶ್ರೇಷ್ಠ ಗುರು ಶ್ರೀ ಗುರುಲಿಂಗ ಜಂಗಮ ಮಹಾರಾಜರು ಇಂಚಗೇರಿ ಸಂಪ್ರದಾಯವನ್ನು ಪ್ರಾರಂಭಿಸಿದರು. ಇವರ ಶಿಷ್ಯರು, ಜಮಖಂಡಿಯ ಭಾವೂಸಾಹೇಬ್ ಮಹಾರಾಜ್ ಉಮದಿಯವರು. ಭಾವೂ ಸಾಹೇಬರ ಶಿಷ್ಯರಾಗಿದ್ದವರು, ಸಿದ್ಧರಾಮೇಶ್ವರ ಮಹಾರಾಜರು. ಸಿದ್ಧರಾಮೇಶ್ವರ ಮಹಾರಾಜರಿಂದ ದೀಕ್ಷೆ ಪಡೆದವರು ಶ್ರೀ ಗಣಪತರಾವ್ ಮಹಾರಾಜರು. ಇದು ಗಣಪತರಾವ್ ಮಹಾರಾಜರ ಗುರುಪರಂಪರೆ.

ಗಣಪತರಾವ್ ಮಹಾರಾಜರು ಸೆಪ್ಟೆಂಬರ್ ೦೯, ೧೯೦೯ ರಂದು ವಿಜಯಪುರಕ್ಕೆ ಸಮೀಪದ ಕನ್ನೂರು ಎಂಬ ಪುಟ್ಟ ಹಳ್ಳಿಯಲ್ಲಿ ಜನಿಸಿದರು. ಅಂದು ಭಾದ್ರಪದ ಮಾಸದ ಶುಕ್ಲ ಚತುರ್ಥಿಯೂ ಆಗಿತ್ತು. ಹೀಗಾಗಿ, ಗಣಪತಿ ಎಂಬ ಅಭಿಧಾನವನ್ನೂ ಅವರು ಪಡೆದುಕೊಂಡರು. ಶ್ರೀಮತಿ ಸರಸ್ವತಿಬಾಯಿ ಅವರ ತಾಯಿ; ಶ್ರೀಮಂತ ಶಿವರಾಮಪಂತ ಕನ್ನೂರು ಅವರ ತಂದೆ.

ಭಕ್ತಿ ಸಂಪ್ರದಾಯದ ಮನೆತನದಲ್ಲಿ ಜನಿಸಿದ ಅವರು ಬಾಲ್ಯದಿಂದಲೂ ಭಕ್ತಿಪರವಶರಾಗಿ ಮೈಮರೆಯುತ್ತಿದ್ದ ಅನೇಕ ಸಂದರ್ಭಗಳಿದ್ದವು. ಹೀಗಾಗಿ, ಭಾವೂಸಾಹೇಬ ಮಹಾರಾಜರಿಂದ ದೀಕ್ಷೆ ಪಡೆದಿದ್ದ ತಮ್ಮ ಅತ್ತೆ ಶ್ರೀಮತಿ ರುಕ್ಮಕ್ಕನವರ ಸಲಹೆಯಂತೆ ಅವರು ಸಿದ್ಧರಾಮೇಶ್ವರ ಮಹಾರಾಜರಿಂದ ದೀಕ್ಷೆ ಪಡೆದರು. ಆಗ ಅವರಿಗೆ ಹದಿನಾಲ್ಕು ವರ್ಷವೂ ತುಂಬಿರಲಿಲ್ಲ. ಅಧ್ಯಾತ್ಮದ ದೀಕ್ಷೆ ಪಡೆದರೂ ಗಣಪತರಾವ್ ತಮ್ಮ ವಿದ್ಯಾಭ್ಯಾಸವನ್ನು ಕಡೆಗಣಿಸಲಿಲ್ಲ. ವಿಜಯಪುರದಲ್ಲಿ ಪ್ರಾಥಮಿಕ ಮತ್ತು ಪ್ರೌಢ ವಿದ್ಯಾಭ್ಯಾಸ ಮಾಡಿ, ೧೯೨೭ರಲ್ಲಿ ಮೆಟ್ರಿಕ್ಯುಲೇಶನ್ ಮುಗಿಸಿದರು. ಸಾಂಗ್ಲಿಯ ವಿಲ್ಲಿಂಗ್ಡನ್ ಕಾಲೇಜು, ಧಾರವಾಡದ ಕರ್ನಾಟಕ ಕಾಲೇಜು ಮತ್ತು ಪುಣೆಯ ಪ್ರತಿಷ್ಠಿತ ಫರ್ಗುಸನ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಿ ಬಿಎಸ್‌ಸಿ (೧೯೩೨) ಪದವಿಯನ್ನು ಪಡೆದರು. ಈ ಅವಧಿಯಲ್ಲಿಯೂ ತಮ್ಮ ಗುರು ಸಿದ್ಧರಾಮೇಶ್ವರರ ನಿರಂತರ ಸಂಪರ್ಕದಲ್ಲಿದ್ದು ಅಧ್ಯಾತ್ಮಸಾಧನೆಯನ್ನು ನಿರಂತರವಾಗಿ ಮುಂದುವರಿಸಿದ್ದರು.

ವಿದ್ಯಾಭ್ಯಾಸ ಮುಗಿದ ಮೇಲೆ ಮಹಾರಾಜರು ಕನ್ನೂರಿಗೆ ಮರಳಿ ತಮ್ಮ ಜಮೀನಿನಲ್ಲಿ ಬೇಸಾಯ ಮಾಡಲು ತೊಡಗಿದರು, ಜೊತೆಗೆ ತಮ್ಮ ಆಧ್ಯಾತ್ಮಿಕ ಸಾಧನೆಯನ್ನೂ ಮುಂದುವರಿಸಿದರು. ವರ್ಷದಲ್ಲಿ ಮೂರುಬಾರಿ ಇಂಚಗೇರಿಯಲ್ಲಿ ನಡೆಯುತ್ತಿದ್ದ ಸಪ್ತಾಹಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಇಂತಹ ಒಂದು ಸಂದರ್ಭದಲ್ಲಿ ಸಿದ್ಧರಾಮೇಶ್ವರ ಮಹಾರಾಜರು ಗಣಪತರಾವ್ ಮಹಾರಾಜರನ್ನು ಕರೆದು "ಕಾಷಾಯ ವಸ್ತ್ರ, ನಿರಂತರ ಧ್ಯಾನ, ಅಪರಿಗ್ರಹ, ಭಿಕ್ಷೆ, ನಿರಂತರ ಅಧ್ಯಯನ" ಗಳ ಮೂಲಕ ಕಠಿಣ ಸನ್ಯಾಸ ಜೀವನವನ್ನು ನಡೆಸುವಂತೆ ಆದೇಶ ನೀಡಿದರು. ಅದರಂತೆ ಅವರು ಕೃಷ್ಣಾ ನದಿಯ ತೀರದಲ್ಲಿ ಒಂದು ವರ್ಷದ ತಪಸ್ಸನ್ನು ಮುಗಿಸಿ ಇಂಚಗೇರಿಗೆ ಮರಳಿದರು.

೧೯೩೪ರಲ್ಲಿ ಅವರಿಗೆ ಪಿತೃವಿಯೋಗವಾಯಿತು. ೧೯೩೬ರಲ್ಲಿ ಸಿದ್ಧರಾಮೇಶ್ವರ ಮಹಾರಾಜರೂ ಇಹಲೋಕ ಯಾತ್ರೆಯನ್ನು ಮುಗಿಸಿದರು. ಗಣಪತರಾವ್ ಮಹಾರಾಜರು ಸೀತಿಮನಿ, ಔದುಂಬರ ಮತ್ತು ಮಹಾಬಲೇಶ್ವರಗಳಲ್ಲಿ ನೆಲೆಸಿ ಸುಮಾರು ೧೪ ವರ್ಷಗಳ ಕಾಲ ಹೆಚ್ಚಿನ ಸಾಧನೆ ಕೈಗೊಂಡರು. ಈ ಅವಧಿಯಲ್ಲಿ ಉಪನಿಷತ್ತುಗಳು, ಭಾಗವತ, ಭಗವದ್ಗೀತೆ, ಜ್ಞಾನೇಶ್ವರಿ ಮುಂತಾದ ಅನೇಕ ಗ್ರಂಥಗಳನ್ನೂ ಅಧ್ಯಯನ ಮಾಡಿದರು.

ಮತ್ತೆ ಇಂಚಗೇರಿಗೆ ಮರಳಿದ ಮಹಾರಾಜರ ಪ್ರವಚನಗಳನ್ನು ಕೇಳಲು ಅಕ್ಕಪಕ್ಕದ ಹಳ್ಳಿಗಳ ಜನರ ಜೊತೆಗೆ ಹುಬ್ಬಳ್ಳಿ, ಧಾರವಾಡ, ಸಾಂಗಲಿ, ಪುಣೆ, ಮುಂಬಯಿ ಮುಂತಾದ ದೂರದೂರದ ನಗರಗಳಿಂದಲೂ ಜನರು ಆಗಮಿಸತೊಡಗಿದರು. ಹೀಗಾಗಿ, ತಮ್ಮ ಸ್ವಂತ ಊರಾದ ಕನ್ನೂರಿಗೆ ತೆರಳುವುದು ಅನಿವಾರ್ಯವಾಯಿತು. ೧೯೫೧ರಲ್ಲಿ ಒಂದು ಸಣ್ಣ ಕುಟೀರವನ್ನು ನಿರ್ಮಿಸಿಕೊಂಡು ಇಂಚಗೇರಿಯಲ್ಲಿ ನಡೆಸುತ್ತಿದ್ದ ಸಪ್ತಾಹಗಳನ್ನು ಮುಂದುವರಿಸಿಕೊಂಡು ಹೋದರು. ಪುಟ್ಟ ಗುಡಿಸಲಿನಿಂದ ಪ್ರಾರಂಭವಾದ ಈ ಶಾಂತಿ ಕುಟೀರವು ೧೯೬೧ರ ಹೊತ್ತಿಗೆ ಸುಭದ್ರ ಕಟ್ಟಡಗಳನ್ನು ಪಡೆದುಕೊಂಡಿತು. ಇಂದು ಇದು ಎಲ್ಲ ಸೌಲಭ್ಯಗಳನ್ನೊಳಗೊಂಡ ೨೬ ಎಕರೆಗಳ ಬೃಹತ್ ಆಧ್ಯಾತ್ಮಿಕ ಕೇಂದ್ರವಾಗಿ ಬೆಳೆದು ನಿಂತಿದೆ. ಸಮಾಜದಲ್ಲಿ ಅನ್ಯಾಯ ಮತ್ತು ಅನೀತಿಗಳು ಕಾಣಿಸಿಕೊಂಡಾಗಲೆಲ್ಲ ಮಹಾರಾಜರು ಕಾರ್ಯಪ್ರವೃತ್ತರಾಗುತ್ತಿದ್ದರು. ೧೯೪೮ರಲ್ಲಿ ಗಾಂಧೀಜಿಯವರ ಹತ್ಯೆಯ ನಂತರ ಅಥಣಿಯ ಸಮೀಪದ ರಾಮತೀರ್ಥದಲ್ಲಿ ಮೇಲ್ವರ್ಗದ ಜನರ ಮೇಲೆ ದೌರ್ಜನ್ಯ ನಡೆದಾಗ ಸಂತ್ರಸ್ತರ ನೆರವಿಗೆ ಧಾವಿಸಿದ್ದು ಒಂದು ನಿದರ್ಶನ. ಸಮಾಜದ ಎಲ್ಲ ವರ್ಗದ ಜನರಿಗೂ ಅಧ್ಯಾತ್ಮ ಜ್ಞಾನವು ಸುಲಭವಾಗಿ ದೊರೆಯಬೇಕು, ಸಮಾಜದಲ್ಲಿ ಅನ್ಯಾಯ ನಡೆಯಕೂಡದು, ಜನರು ಸಾಮರಸ್ಯದಿಂದ ಬಾಳಬೇಕು" ಎಂದು ಮುಂತಾದ ಹಲವು ಉದ್ದೇಶಗಳನ್ನಿರಿಸಿಕೊಂಡು ೧೯೩೨ರಲ್ಲಿ ಭಾರತೀಯ ಸುರಾಜ್ಯ ಸಂಸ್ಥೆಯನ್ನು ಮಹಾರಾಜರು ಪ್ರಾರಂಭಿಸಿದರು.



"ಈ ಸಂಸ್ಥೆಯ ಹಲವಾರು ಶಾಖೆಗಳು ಪಾರಂಭವಾಗಿ ಮಹಾರಾಜರ ಶಿಷ್ಯರು ಸಾಮೂಹಿಕವಾಗಿ ಅದರ ಸದಸ್ಯರಾದರು, ಸಮಾಜ ಸೇವೆಯಲ್ಲಿ ತೊಡಗಿಕೊಂಡರು.

ಸಮಾಜದಲ್ಲಿನ ಭ್ರಷ್ಟಾಚಾರ, ಅಪ್ರಾಮಾಣಿಕತೆ, ದುಶ್ಚಟ, ಅನೀತಿಗಳನ್ನು ತೊಡೆದು ಹಾಕಲು ಶ್ರಮಿಸುತ್ತಿರುವ ಈ ಸಂಸ್ಥೆಯು ಮಕ್ಕಳಿಗಾಗಿ ಬೇಸಿಗೆ ಶಿಬಿರಗಳನ್ನೂ ಆಯೋಜಿಸುತ್ತಿದೆ. ಜೊತೆಗೆ, ಸುರಾಜ್ಯ ಪಥ ಎಂಬ ದ್ವೈಮಾಸಿಕ ಪತ್ರಿಕೆಯನ್ನೂ ಪ್ರಕಟಿಸುತ್ತಿದೆ. ಸಂಸ್ಥೆಯ ಅಂಗವಾಗಿರುವ ರಾಮರಾಜ್ಯ ಕಲಾಮೇಳವು ಬೀದಿ ನಾಟಕ, ಭಾರೂಡ, ಕೀರ್ತನೆಗಳ ಮೂಲಕ ಜನರನ್ನು ನೀತಿಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುತ್ತಿದೆ. ಪ್ರತಿವರ್ಷ ಆರು ದಿಂಡಿ ಮೇಳಗಳ ಮೂಲಕ ಸುತ್ತಮುತ್ತಲಿನ ಇನ್ನೂರಕ್ಕೂ ಹೆಚ್ಚು ಹಳ್ಳಿಗಳನ್ನು ಸಂಪರ್ಕಿಸುವ ಸ್ವಯಂಸೇವಕರು ಮಹಾರಾಜರ ಬೋಧನೆಗಳನ್ನು ಜನರಿಗೆ ತಲುಪಿಸುತ್ತಿದ್ದಾರೆ.

ಎಲ್ಲರಿಗೂ ಆತ್ಮಜ್ಞಾನ ದೊರೆಯಬೇಕು ಎಂಬ ಆಶಯದಿಂದ ಮಹಾರಾಜರು ಸುಲಭ ಆತ್ಮಜ್ಞಾನ ಎಂಬ ಗ್ರಂಥವನ್ನು ರಚಿಸಿದರು. ಈ ಗ್ರಂಥದ ಮೂಲಕ ತಾವು ನಿರಂತರವಾಗಿ ಅಸ್ತಿತ್ವದಲ್ಲಿರುತ್ತೇವೆ ಎಂದು ತಿಳಿಸಿರುವುದರಿಂದ ಇದನ್ನು ನಿತ್ಯಪಾರಾಯಣ ಗ್ರಂಥವಾಗಿಯೂ ಬಳಸಲಾಗುತ್ತಿದೆ. ಈ ಗ್ರಂಥವು ಮರಾಠಿ, ಹಿಂದಿ, ಗುಜರಾತಿ, ಇಂಗ್ಲಿಶ್, ಸ್ಪಾನಿಶ್, ಫ್ರೆಂಚ್ ಮುಂತಾದ ಅನೇಕ ಭಾಷೆಗಳಲ್ಲಿ ಪ್ರಕಟವಾಗಿದೆ. ಪರಮಾರ್ಥ ಮಾರ್ಗ ಪ್ರದೀಪ, ಮನೋಬೋಧ, ವಿವೇಕ ಕುಂಜ, ಯಶಸ್ವೀ ಜೀವನ, ಅಷ್ಟಾವಕ್ರ ಗೀತಾ, ಗುರುಗೀತಾ ಸಾರ, ಸುಲಭ ವೇದಾಂತ ವಾಹಿನಿ, ಆತ್ಮಾನುಭವ ಸಾಧನೆ ಮುಂತಾದ ಅನೇಕ ಗ್ರಂಥಗಳನ್ನೂ ಅವರು ಬರೆದಿದ್ದಾರೆ. ಇಂದು ಶಾಂತಿಕುಟೀರದಲ್ಲಿ ಅನೇಕ ಸಪ್ತಾಹಗಳನ್ನೂ ಮಕ್ಕಳಿಗಾಗಿ ಬೇಸಿಗೆ ಶಿಬಿರಗಳನ್ನೂ ಆಯೋಜಿಸಲಾಗುತ್ತಿದೆ. ಜಾತಿ, ಮತ, ಧರ್ಮ, ಮೇಲು, ಕೀಳು ಎಂಬ ಭೇದವಿಲ್ಲದೆ ಸಾವಿರಾರು ಜನರು ಶಾಂತಿಕುಟೀರಕ್ಕೆ ಭೇಟಿ ನೀಡಿ ಅಧ್ಯಾತ್ಮ ಸಾಧನೆಯಲ್ಲಿ ನಿರತರಾಗುತ್ತಿದ್ದಾರೆ.

"ದುಶ್ಚಟಗಳಿಂದ ದೂರವಿರಿ, ಅನೈತಿಕ ವ್ಯವಹಾರಗಳನ್ನು ಮಾಡಬೇಡಿ, ಉನ್ನತ ಚಿಂತನೆ; ಸರಳ ಜೀವನ ತತ್ತ್ವವನ್ನು ಪಾಲಿಸಿ, ಸ್ವದೇಶಿ ಮಸ್ತುಗಳನ್ನು ಬಳಸಿ, ಅಹಿಂಸೆಯನ್ನು ಪಾಲಿಸಿ; ಎಲ್ಲರೊಂದಿಗೂ ಸಾಮರಸ್ಯದಿಂದ ಬಾಳಿ, ವಾರಕ್ಕೊಂದು ದಿನ ಹಳ್ಳಿಗೆ ತೆರಳಿ ಸೇವೆ ಮಾಡಿ, ಲಂಚ ತೆಗೆದುಕೊಳ್ಳಬೇಡಿ, ಪ್ರತಿದಿನ ಎರಡು ಗಂಟೆಗಳನ್ನು ಆಧ್ಯಾತ್ಮಿಕ ಸಾಧನೆಗೆ ಮೀಸಲಿರಿಸಿ" - ಇವು ಗಣಪತರಾವ್ ಮಹಾರಾಜರ ಬೋಧನೆಗಳಲ್ಲಿ ಕೆಲವು.

ಗಣಪತರಾವ್ ಮಹಾರಾಜರ ೯೬ನೇ ಜನ್ಮದಿನವನ್ನು ೧೮/೦೯/೨೦೦೪ರಲ್ಲಿ ಅದ್ದೂರಿಯಿಂದ ಆಶ್ರಮದಲ್ಲಿ ಆಚರಿಸಲಾಯಿತು. ತಮ್ಮ ತೀವ್ರ ಅನಾರೋಗ್ಯದ ನಡುವೆಯೂ ಅವರು ವೇದಿಕೆಗೆ ಆಗಮಿಸಿ ಭಕ್ತರಿಗೆ ದರ್ಶನ ನೀಡಿದರು. ಮೂರುದಿನಗಳ ನಂತರ ಅಂದರೆ ೨೦/೦೯/೨೦೦೪ರಂದು ಅವರು ತಮ್ಮ ಜೀವನಯಾತ್ರೆಯನ್ನು ಸಮಾಪ್ತಿಗೊಳಿಸಿದರು.

"ಜೀವನೇ ನಿಜವಾದ ಶಿವ, ಆದುದರಿಂದ ಪ್ರತಿಯೊಬ್ಬ ಜೀವಿಯೂ ಜೀವನದಲ್ಲಿ ತನ್ನ ಮೂಲ ಸ್ವರೂಪವಾದ ಆನಂದದಿಂದ ತುಂಬಿಕೊಂಡಿರುತ್ತಾನೆ. ಅದನ್ನು ಅನುಭವಿಸಬೇಕು" - ಸದ್ಗುರು ಗಣಪತರಾವ್ ಮಹಾರಾಜರು

ಶ್ರೀಮತಿ ತೇಜಸ್ವಿನಿಯವರ ತಂದೆ ಪ್ರಭಾಕರ ಓಕ್ ಅವರ ಷಷ್ಟ್ಯಬ್ದಿ ಸಮಾರಂಭವು ಗಣಪತರಾವ್ ಮಹಾರಾಜರ ಸಾನ್ನಿಧ್ಯದಲ್ಲಿ ನಡೆಯಿತು. ಇದೇ ಸಂದರ್ಭದಲ್ಲಿ ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿಯಾಗಿ ಅನಂತಕುಮಾರರ ನೇಮಕದ ಆದೇಶವೂ ಹೊರಬಿದ್ದಿತ್ತು. ಇದು ಮಹಾರಾಜರು ಅನಂತಕುಮಾರರ ಮತ್ತು ಅದಮ್ಯ ಚೇತನ ಸಂಸ್ಥೆಯ ಮೇಲೆ ಹೊಂದಿದ್ದ ಅನುಗ್ರಹದ ಸಂಕೇತ. ಮುಂದೆ ಕರ್ನಾಟಕದಲ್ಲಿ ಚುನಾವಣೆ ಪ್ರಚಾರ ಮುಗಿಸಿ ಮಹಾರಾಷ್ಟ್ರದಲ್ಲಿ ಪ್ರಚಾರಕ್ಕೆ ತೊಡಗಿಕೊಳ್ಳುವ ಮೊದಲು ಕನ್ನೂರಿನಲ್ಲಿ ಮಹಾರಾಜರನ್ನು ಪ್ರತಿಬಾರಿಯೂ ಅನಂತಕುಮಾರ್ ಭೇಟಿ ಮಾಡುತ್ತಿದ್ದರು. ವೆಂಕಯ್ಯ ನಾಯ್ಡು, ಯಡಿಯೂರಪ್ಪ ಮುಂತಾದ ಹಿರಿಯ ನಾಯಕರಿಗೆ ಕೂಡ ಮಹಾರಾಜರ ಭೇಟಿ ಮಾಡಿಸಿದ್ದರು.

ಆಶ್ರಮದ ವಿಶಾಲವಾದ ಭೋಜನ ಶಾಲೆಯ ನಿರ್ಮಾಣಕ್ಕೆ ಅನಂತಕುಮಾರ್ ದೇಣಿಗೆ ನೀಡಿದ್ದರು.

## ನಾನು ಕಂಡಂತೆ



ಅನಂತಕುಮಾರ್

# ಅನಂತ ನೆನಪುಗಳು

ಅನಂತಕುಮಾರ ಅವರು ಇಂದು ನಮ್ಮೊಂದಿಗೆ ಇಲ್ಲವೆಂಬ ಕಲ್ಪನೆಯೇ ದುಃಖಕರ. ಅವರಂತಹ ದೈತ್ಯ ಪ್ರತಿಭೆ, ಅಸಾಮಾನ್ಯ ಯೋಚನಾ ಶೈಲಿ ಮತ್ತು ವಿವೇಚನಾ ಸಾಮರ್ಥ್ಯವುಳ್ಳ ವ್ಯಕ್ತಿ ಬಹುಶಃ ಇಂದು ಬದುಕಿದ್ದರೆ ಯಾವ ಸ್ಥಾನದಲ್ಲಿ ಯಾವ ಎತ್ತರವನ್ನು ತಲುಪುತ್ತಿದ್ದರು ಎಂದು ಊಹಿಸುವುದು ಕಷ್ಟಸಾಧ್ಯ. ಸಾಮಾನ್ಯ ಕುಟುಂಬದಲ್ಲಿ ಜನಿಸಿ, ತಮ್ಮ ಅಗಾಧ ಪ್ರತಿಭೆಯಿಂದ ಬೆಳಗಿದ ಅನಂತಕುಮಾರ ಅವರ ವ್ಯಕ್ತಿತ್ವವೇ ಅನನ್ಯವಾಗಿತ್ತು.

೧೯೮೦ರಲ್ಲಿ ಕಲಬುರಗಿಯಲ್ಲಿ ಜರುಗಿದ ಅಭಾವಿಪದ ಪ್ರಾಂತ ಸಮಾವೇಶದಲ್ಲಿ ರಾಜ್ಯ ಕಾರ್ಯದರ್ಶಿಯಾಗಿ ಶ್ರೀ ಅನಂತಕುಮಾರ ಆಯ್ಕೆಯಾದಾಗ ನಾನು ಆ ಕಾರ್ಯಕಾರಿ ಸಮಿತಿಯ ಸದಸ್ಯನಾಗಿದ್ದೆ. ಅದರಿಂದ ನನಗೆ ಆಶ್ಚರ್ಯವಾಗಿತ್ತು, ಕಾರಣ ನಾನು ಕೇವಲ ಒಂದು ವರ್ಷದ ಹಿಂದೆಯಷ್ಟೆ ಹರಿಹರ ನಗರದ ವಿದ್ಯಾರ್ಥಿ ಪರಿಷತ್ ಕಾರ್ಯದರ್ಶಿಯಾಗಿ ವಿದ್ಯಾರ್ಥಿ ಪರಿಷತ್ತಿಗೆ ಸ್ಪೇರ್ಪಡೆಗೊಂಡವನು. ನನಗೆ ಸ್ವಲ್ಪ ಮುಜುಗರವಾಗಿ ಅನಂತಕುಮಾರ ಅವರಿಗೆ ನನಗಿಂತ ಬೇರೆಯವರನ್ನು ಆಯ್ಕೆ ಮಾಡಿದ್ದರೆ ಒಳಿತಾಗುತ್ತಿತ್ತು ಎಂದು ಹೇಳಿದಾಗ ಅನಂತಕುಮಾರರು "ಯಾರಿಗೆ ಏನನ್ನು ಮಾಡಬೇಕು ಎಂಬುದು ನನಗೆ ತಿಳಿದಿದೆ, ನೀನು ಹೇಳುವುದು ಬೇಡ" ಎಂದಾಗ ಅವರಲ್ಲಿ ಗಟ್ಟಿ ನಾಯಕತ್ವ ಹಾಗೂ ಭವಿಷ್ಯದ ಬಗ್ಗೆ ಇದ್ದ ಅಪಾರ ಕಾಳಜಿ ಸ್ಪಷ್ಟವಾಗಿತ್ತು.

ಅನಂತಕುಮಾರ ಅವರು ತಮ್ಮ ಜವಾಬ್ದಾರಿಯ ವ್ಯಾಪ್ತಿಯಲ್ಲಿ ಯಾವುದೇ ಕೆಲಸವಿದ್ದರೂ ಅದನ್ನು ಯಶಸ್ವಿಯಾಗಿ ಪೂರ್ಣಗೊಳಿಸುವುದೇ ಅವರ ಗುರಿಯಾಗಿತ್ತು. ಹಿಡಿದ ಕೆಲಸವನ್ನು ಯಶಸ್ವಿಯಾಗಿ ಪೂರೈಸಿದ ಮೇಲೆಯೇ ಅವರಿಗೆ ನೆಮ್ಮದಿ. ವಿದ್ಯಾರ್ಥಿ ಪರಿಷತ್‌ನ ರಾಜ್ಯ ಕಾರ್ಯದರ್ಶಿಯಾಗಿದ್ದಾಗ ಅವರು ರಾಜ್ಯದಾದ್ಯಂತ ಬಹುತೇಕ ಸಾಮಾನ್ಯ ಬಸ್‌ಗಳಲ್ಲಿಯೇ ಪ್ರಯಾಣಿಸುತ್ತಿದ್ದರು. ಅವರು ಹರಿಹರಕ್ಕೆ ಬಂದಾಗ ಸಹಜವಾಗಿ ನಮ್ಮ ಮನೆಯಲ್ಲಿ ವಾಸ್ತವ್ಯ ಮಾಡುತ್ತಿದ್ದರು. ಹರಿಹರ ನಗರದಲ್ಲಿ ನನ್ನ ಸೈಕಲ್ ಮೇಲೆ ಡಬಲ್ ರೈಡಿಂಗ್ ಮಾಡಿಕೊಂಡು ಕಾಲೇಜುಗಳಿಗೆ ಭೇಟಿ ನೀಡುತ್ತಿದ್ದ ಪರಿ ಬಹಳ ಮುದ ಕೊಡುತ್ತಿತ್ತು. ಕಾರಣ ನನಗಿಂತ ದೊಡ್ಡವರಾಗಿದ್ದ ಅನಂತಕುಮಾರ ಅವರನ್ನು ಕರೆದುಕೊಂಡು ಓಡಾಡುವುದೇ ಒಂದು ಸಾಹಸವಾಗುತ್ತಿತ್ತು. ಹಲವು ಬಾರಿ ರಸ್ತೆಯಲ್ಲಿ ಓಡಾಡುವ ಪ್ರಸಂಗ ಬಂದಾಗ ರಸ್ತೆಯಲ್ಲಿ ನನ್ನ ಪರಿಚಿತರು ನನ್ನನ್ನು ಮಾತನಾಡಿಸುವ ಪರಿ ಹಾಗೂ ಜನಪ್ರಿಯತೆಯನ್ನು ಕಂಡ ಅನಂತಕುಮಾರ ನೀನು ಬಹಳ ಬೇಗ ಈ ಊರಿನ ಪುರಸಭಾಧ್ಯಕ್ಷನಾಗುತ್ತೀಯಾ ಎಂದು ಹೇಳುತ್ತಿದ್ದರು. ಬಹಳ ಹಾಸ್ಯ ಪ್ರವೃತ್ತಿಯ ಅನಂತಕುಮಾರರು ಮಾತನಾಡುತ್ತಾ ಕುಳಿತರೆ ಸಮಯ ಹೋಗುತ್ತಿದ್ದುದೇ ತಿಳಿಯುತ್ತಿರಲಿಲ್ಲ. ಆದರೆ ಅವರೊಂದಿಗೆ ಮಾತನಾಡುತ್ತಿದ್ದರೆ ಅನೇಕ ವಿಶಿಷ್ಟವಾದ ಗಂಭೀರ ವಿಚಾರಗಳು ನಮಗೆ ತಿಳಿಯುತ್ತಿದ್ದವು.

ವಿದ್ಯಾರ್ಥಿ ಪರಿಷತ್ತಿನ ನನ್ನಂತಹ ಅನೇಕ ಕಾರ್ಯಕರ್ತರನ್ನು ಗುರುತಿಸಿ, ನಾಯಕತ್ವದ ಗುಣಗಳನ್ನು ಬೆಳೆಸುವಲ್ಲಿ ಅನಂತಕುಮಾರ ಅವರ ಪಾತ್ರ ಮಹತ್ವದ್ದಾಗಿತ್ತು. ವಿದ್ಯಾರ್ಥಿ ಕ್ಷೇತ್ರಕ್ಕೆ ಮಾತ್ರ ಹೋರಾಟ ಸೀಮಿತವಾಗಬಾರದು, ಸಮಾಜದ ಯಾವುದೇ ಸಮಸ್ಯೆಗಳಿದ್ದರೂ ಅದರ ವಿರುದ್ಧ ಹೋರಾಟ ಮಾಡುವುದು ಅಗತ್ಯ ಎಂಬುದನ್ನು ಅವರು ವಿದ್ಯಾರ್ಥಿಗಳ ಮನಮುಟ್ಟುವಂತೆ ಹೇಳುತ್ತಿದ್ದರು. ಅದಕ್ಕೆ ತಕ್ಕಂತೆ ಯಾವ ರೀತಿಯ ಹೋರಾಟಗಳನ್ನು ಕೈಗೊಳ್ಳಬೇಕು ಎಂಬುದನ್ನು ನಿಖರವಾಗಿ ಮತ್ತು ಮನಮುಟ್ಟುವಂತೆ ತಿಳಿಸುವುದರಲ್ಲಿ ಅವರು ಯಶಸ್ವಿಯಾಗಿದ್ದರು. ಅಷ್ಟೇ ಅಲ್ಲದೆ ಅನೇಕ ಹೋರಾಟಗಳಲ್ಲಿ ನಮ್ಮೆಲ್ಲರನ್ನು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸುತ್ತಿದ್ದರು.

1980ರ ದಶಕದಲ್ಲಿ ಅಸ್ಸಾಂ ರಾಜ್ಯದಲ್ಲಿ ಬಾಂಗ್ಲಾದೇಶದ ಪ್ರಜೆಗಳೊಂದಿಗೆ ವಿದೇಶಿ ನುಸುಳುಕೋರರು ಸೇರಿಕೊಂಡ ಸಂದರ್ಭದಲ್ಲಿ, ಅಲ್ಲಿನ ವಿದ್ಯಾರ್ಥಿಗಳು ತೀವ್ರತರವಾದ ಹೋರಾಟವನ್ನು ನಡೆಸುತ್ತಿದ್ದರು. ಆ ವಿದ್ಯಾರ್ಥಿಗಳ ಹೋರಾಟಕ್ಕೆ ಬೆಂಬಲ ಸೂಚಿಸುವ ಹಿನ್ನೆಲೆಯಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ 1982ರ ಅಕ್ಟೋಬರ್ 2ರಂದು ಒಂದು ಸಾವಿರ ಕಾರ್ಯಕರ್ತರ ತಂಡದೊಂದಿಗೆ ಅಸ್ಸಾಂ ರಾಜ್ಯದ ರಾಜಧಾನಿ ಗೌಹಾಟಿಯಲ್ಲಿ ಪ್ರತಿಭಟನೆ ನಡೆಸುವಲ್ಲಿ ಯಶಸ್ವಿಯಾಯಿತು. ದೇಶದಾದ್ಯಂತ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತರು ಪಾಲ್ಗೊಂಡಿದ್ದರೂ, ಕರ್ನಾಟಕದಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅನಂತಕುಮಾರ ಮತ್ತು ಶ್ರೀ ದತ್ತಾತ್ರೇಯ ಹೊಸಬಾಳೆ ಅವರ ನೇತೃತ್ವದಲ್ಲಿ ನಡೆದ ಆ ಹೋರಾಟದಲ್ಲಿ ಹರಿಹರದಿಂದ ನನಗೆ ಮತ್ತು ಶ್ರೀ ವೀರಣ್ಣ ಬ್ಯಾಗೋಟಿಯವರಿಗೆ ಪಾಲ್ಗೊಳ್ಳಲು ಅವಕಾಶ ಲಭ್ಯವಾಗಿತ್ತು. ನಾನು ಮತ್ತು ವೀರಣ್ಣ ಬ್ಯಾಗೋಟಿ ಅಸ್ಸಾಂ ಹೋರಾಟಕ್ಕೆ ಹೊರಟಾಗ ಹರಿಹರದ ನಾಗರಿಕರೆಲ್ಲ ನಮ್ಮನ್ನು ಭವ್ಯವಾದ ಮೆರವಣಿಗೆಯ ಮೂಲಕ ಬೀಳ್ಕೊಟ್ಟಿದ್ದರು.ನಾವು ಗೌಹಾತಿಯನ್ನು ಮುಟ್ಟುವ ಯಾವುದೇ ಖಚಿತ ಸೂಚನೆಗಳಿರಲಿಲ್ಲ. ಏಕೆಂದರೆ ಸಾಕಷ್ಟು ಕಡೆ ರೈಲು ಗಾಡಿಗಳನ್ನು ಬದಲಾಯಿಸುವುದು ಅನಿವಾರ್ಯವಾಗಿತ್ತು. ಜನರಲ್ ಕಂ ಪಾ ರ್ಟ್ ಮೆಂ ಟ್ ಗ ಳ ಲ್ಲಿ ಕೆಳಗಡೆ ಕುಳಿತು ರಾತ್ರಿಯೆಲ್ಲಾ ಪ್ರಯಾಣ ಮಾಡುವಂತಾಗಿತ್ತು.



**ಬಿ ರಾಜಶೇಖರ್**
ಅಧ್ಯಕ್ಷರು, ಸಿಂಧು ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಸಿಂಧನೂರು

ಅನಂತಕುಮಾರ, ದತ್ತಾತ್ರೇಯಹೊಸಬಾಳೆ ಮತ್ತು ಶ್ರೀ ವಿಷ್ಣುಕಾಂತ್ ಚಟಪಲ್ಲಿಯಂತವರು ಸದಾ ನಮಗೆ ಧೈರ್ಯ ತುಂಬುವ ಜೊತೆಗೆ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಹುರಿದುಂಬಿಸುತ್ತಿದ್ದರು. ರೈಲು ಪ್ರಯಾಣದಲ್ಲಿ ಎಲ್ಲಿಯೂ ಕುಳಿತುಕೊಳ್ಳಲು ಸ್ಥಳಾವಕಾಶ ದೊರೆಯದಿದ್ದಾಗ, ಇಡೀ ಒಂದು ರಾತ್ರಿ ನಾನು ಮತ್ತು ಅನಂತಕುಮಾರ ರೈಲ್ವೆ ಬೋಗಿಯ ಬಾಗಿಲಲ್ಲಿ ಒಬ್ಬರನ್ನೊಬ್ಬರು ಹಿಡಿದುಕೊಂಡು ಕುಳಿತು ಪ್ರಯಾಣ ಮಾಡಿದ್ದು ಒಂದು ರೋಮಾಂಚಕ ಅನುಭವವಾಗಿತ್ತು. ಹೋರಾಟವನ್ನು ಯಶಸ್ವಿಯಾಗಿ ಪೂರೈಸಿ ಅದೃಷ್ಟವಶಾತ್ ನಾವೆಲ್ಲರೂ ಸುರಕ್ಷಿತವಾಗಿ ನಮ್ಮ ನಮ್ಮ ಊರುಗಳಿಗೆ ತಲುಪಿದೆವು.

ಆಗ ನಾನು ಮೈಸೂರಿನ ವಿಶ್ವವಿದ್ಯಾನಿಲಯದಲ್ಲಿ ಮುದ್ರಣ ಮತ್ತು ತಂತ್ರಜ್ಞಾನ ವಿಷಯದಲ್ಲಿ ಅಧ್ಯಯನ ಮಾಡುತ್ತಿದ್ದೆ. ಮೈಸೂರು ನಗರದ ಅನೇಕ ಕಾಲೇಜುಗಳಲ್ಲಿ ತೀವ್ರತರವಾದ ಸಮಸ್ಯೆಗಳಿದ್ದವು. ಅವುಗಳ ವಿರುದ್ಧ ಹೋರಾಟ ಮಾಡುವುದು ಅನಿವಾರ್ಯವಾದ ಕಾರಣಕ್ಕಾಗಿ ಮೈಸೂರು ನಗರದ ಎಲ್ಲಾ ಕಾಲೇಜುಗಳ ವಿದ್ಯಾರ್ಥಿ ಸಂಘಗಳ ಅಧ್ಯಕ್ಷರುಗಳ ಒಂದು ಕ್ರಿಯಾ ಸಮಿತಿಯನ್ನು ರಚಿಸಿದ ಸಮಿತಿಗೆ ಪ್ರೊಫೆಸರ್ ಶ್ರೀ ಕೆ. ವಿ. ಅರ್ಕನಾಥ ಅವರ ಸಲಹೆಯಂತೆ, ವಿದ್ಯಾರ್ಥಿ ಪರಿಷತ್‌ನ ಪೂರ್ಣಾವಧಿ ಕಾರ್ಯಕರ್ತರಾಗಿದ್ದ ಶ್ರೀ ಕೆ. ಎಸ್. ಜಯಂತ್ ಅವರ ಮಾರ್ಗದರ್ಶನದಲ್ಲಿ ಸಮಿತಿಯನ್ನು ರಚಸಿ ನನ್ನನ್ನು ಆ ಸಮಿತಿಯ ಸಂಚಾಲಕನನ್ನಾಗಿ ಆಯ್ಕೆ ಮಾಡಿ ಬಹು ದೊಡ್ಡ ಜವಾಬ್ದಾರಿಯನ್ನು ನೀಡಿದರು.

ಮೈಸೂರಿನಲ್ಲಿ ವಿದ್ಯಾರ್ಥಿ ಹೋರಾಟಗಳನ್ನು ಯಶಸ್ವಿಯಾಗಿ ನಡೆಸಿದ ನೆನಪುಗಳು ಇವೆ. ವಿದ್ಯಾರ್ಥಿ ಪರಿಷತ್ ಮತ್ತು ಮೈಸೂರು ನಗರ ವಿದ್ಯಾರ್ಥಿ ಹೋರಾಟ ಸಮಿತಿಯ ಆಶ್ರಯದಲ್ಲಿ ಅನೇಕ ಹೋರಾಟಗಳನ್ನು ಮಾಡಿ ಯಶಸ್ಸನ್ನು ಸಾಧಿಸಿದೆವು. ಅದೇ ಸಂದರ್ಭದಲ್ಲಿ ಮೈಸೂರು ಪ್ರವಾಸದಲ್ಲಿದ್ದಾಗ ಒಮ್ಮೆ ಶ್ರೀ ಅನಂತಕುಮಾರ, ಶ್ರೀ ಬಿ. ಎಸ್. ಯಡಿಯೂರಪ್ಪ ಮತ್ತು ಅಂದಿನ ಬಿಜೆಪಿಯ ಹಿರಿಯ ನಾಯಕರಾಗಿದ್ದ ಶ್ರೀ ಕರಂಬಳ್ಳಿ ಸಂಜೀವ ಶೆಟ್ಟಿಯವರಿದ್ದ ಕಾರು ನಮ್ಮ ಶೆಡ್‌ಗೆ ಬಂದಾಗ ನನಗೆ ಆಶ್ಚರ್ಯವಾಯಿತು. ಅನಂತಕುಮಾರ ಅವರು ತಮ್ಮ ಜವಾರಿ ಭಾಷೆಯಲ್ಲಿ "ಏನೋ ಗೌಡ್ರ, ಊರಲ್ಲಿ ಹೀರೋ ಆಗಿದ್ದೀಯಾ" ಎಂದು ನಮ್ಮ ಅಂದಿನ ಹೋರಾಟಗಳನ್ನು ಪ್ರಶಂಸಿಸುವ ಜೊತೆಗೆ ಮೈಸೂರಿನ ವಿದ್ಯಾಭ್ಯಾಸ ಮುಗಿದ ತಕ್ಷಣ ಪಕ್ಷದ ಕಾರ್ಯ ಮಾಡುವ ಉದ್ದೇಶಕ್ಕಾಗಿ ಬೆಂಗಳೂರಿಗೆ ಬರುವಂತೆ ಆದೇಶ ನೀಡಿದರು. ಆದರೆ ನನ್ನ ವಿದ್ಯಾಭ್ಯಾಸ ಮುಗಿದ ನಂತರ ಸಂಘದ ಕೆಲ ಹಿರಿಯರು ಮೈಸೂರಿನಲ್ಲಿ ಇನ್ನೂ ಸ್ವಲ್ಪ ದಿನ ಇರುವಂತೆ ಆದೇಶ ನೀಡಿದರು. ಹಾಗಾಗಿ ಮೈಸೂರಿನಲ್ಲಿ ಒಂದು ವರ್ಷ ಪತ್ರಕರ್ತನಾಗಿ ಕಾರ್ಯ ನಿರ್ವಹಿಸುವಂತಾಯಿತು. ಬಹುಶಃ ಅಂದು ಅನಂತಕುಮಾರ ಅವರ ಆಸೆಯಂತೆ ಬೆಂಗಳೂರಿಗೆ ಹೋಗಿದ್ದರೆ ನಾನು ಏನಾಗುತ್ತಿದ್ದೆನೋ ನಾನರಿಯೆ.

ಅನೇಕ ಸಂದರ್ಭದಲ್ಲಿ ನಮಗೆಲ್ಲಾ ಪ್ರಸಕ್ತ ರಾಜಕೀಯ ಸನ್ನಿವೇಶಗಳು ಮತ್ತು ರಾಜಕೀಯದ ಸೂಕ್ಷ್ಮಗಳನ್ನು ಬಿಡಿಸಿ ಬಿಡಿಸಿ ಹೇಳುತ್ತಿದ್ದರು. ಅತ್ಯಂತ ಚತುರ ಮತಿಯಾಗಿದ್ದ ಅನಂತಕುಮಾರ ಅವರು ತಮ್ಮ ಜವಾಬ್ದಾರಿಯ ವ್ಯಾಪ್ತಿಯಲ್ಲಿ ಯಾವುದೇ ಕೆಲಸಗಳು ಬಂದಾಗಲೂ ಅದಕ್ಕೆ ಸೂಕ್ತ ಪರಿಹಾರ ಮಾರ್ಗಗಳನ್ನು ಕಂಡುಹಿಡಿಯುತ್ತಿದ್ದರೇ ವಿನಃ ಎಂದಿಗೂ ಪಲಾಯನವಾದಿಯಾಗಿ ನಡೆದುಕೊಳ್ಳಲಿಲ್ಲ. ಕರ್ನಾಟಕದ ಬಿಜೆಪಿ ದೃಷ್ಟಿಯಿಂದ ಅಥವಾ ಬಿಜೆಪಿಯ ಏಳಿಗೆಗಾದರೂ ಅನಂತಕುಮಾರ ಇನ್ನೂ ಹೆಚ್ಚು ದಿನ ನಮ್ಮೊಂದಿಗಿರಬೇಕಾಗಿತ್ತು. ಅವರ ಅಗಲಿಕೆಯು ಭೌತಿಕವಾಗಿದ್ದರೂ, ಅವರ ಪ್ರೇರಣೆಯು ಎಲ್ಲೆಡೆ ಹರಡಿದೆ. ಅವರು ನನಗೆ, ನನ್ನ ತಲೆಮಾರಿಗೆ, ಈ ಸಮಾಜಕ್ಕೆ ಬೋಧಿಸಿದ ಪಾಠಗಳು ಶಾಶ್ವತ.

◆



**ಹುಬ್ಬಳ್ಳಿ:** ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದ ದ್ವಿತೀಯ ವಾರ್ಷಿಕೋತ್ಸವದ ಅಂಗವಾಗಿ "ಅನಂತ ಉತ್ಸವ" ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮಕ್ಕಳಿಗಾಗಿ ಮತ್ತು ಸಾರ್ವಜನಿಕರಿಗಾಗಿ ದೇಶಭಕ್ತಿ ಗಾಯನ ಸ್ಪರ್ಧೆ, ಭಗವದ್ಗೀತಾ ಶ್ಲೋಕ ಪಠಣ ಸ್ಪರ್ಧೆ, ಯೋಗಾಸನ ಸ್ಪರ್ಧೆ, ಭಜನಾ ಸ್ಪರ್ಧೆ ಹಾಗೂ ಅಖಂಡ ವಂದೇಮಾತರಂ ಗಾಯನ ಸ್ಪರ್ಧೆಗಳನ್ನು ವಿವಿಧ ದಿನಾಂಕಗಳಂದು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮಗಳಿಗೆ ಮಾರ್ಚ್ 24 ರಂದು ಶ್ರೀ ಶ್ರೀನಿವಾಸ್ ಜೋಶಿ ಮತ್ತು ಲಕ್ಷ್ಮಣ್ ರಾವ್ ಓಕ್ ಅವರು ಚಾಲನೆ ನೀಡಿದರು. ಭಜನಾ ಸ್ಪರ್ಧೆಯಲ್ಲಿ 200ಕ್ಕೂ ಹೆಚ್ಚು ಸ್ಪರ್ಧಿಗಳು 16ಕ್ಕೂ ಹೆಚ್ಚು ತಂಡಗಳ ಮೂಲಕ ಭಾಗವಹಿಸಿ ಭಕ್ತಿಗೀತೆಗಳನ್ನು ಪ್ರಸ್ತುತಪಡಿಸಿದರು. ಮಕ್ಕಳಿಗಾಗಿ ಏರ್ಪಡಿಸಲಾಗಿದ್ದ ಭಾಷಣ, ಗಾಯನ, ಯೋಗಾಸನ ಮುಂತಾದ ಎಲ್ಲಾ ಎಲ್ಲಾ ಸ್ಪರ್ಧೆಗಳಲ್ಲಿ ವಿವಿಧ ವಯೋಮಾನದ ಮಕ್ಕಳು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಉತ್ಸಾಹದಿಂದ ಪಾಲ್ಗೊಂಡರು.

ಉತ್ಸವಕ್ಕೆ ಭೇಟಿ ನೀಡಿದ ಸಾರ್ವಜನಿಕರು ಶ್ರೀ ಅನಂತಕುಮಾರ್ ಅವರನ್ನು ಕುರಿತಾದ ವಿಶೇಷ ಚಿತ್ರಪ್ರದರ್ಶಿನಿ ಹಾಗೂ ಪ್ರೇರಣಾದಾಯಕ ಕಿರುಚಿತ್ರವನ್ನು ವೀಕ್ಷಿಸಿದರು.









**ಇತರ ಚಟುವಟಿಕೆಗಳು:** ಅದಮ್ಯ ಚೇತನವು ಭಗವದ್ಗೀತಾ ಪಠಣ. ಶ್ರೀಚೇತನ ಸಭೆ, ಪ್ಲೇಟ್ ಬ್ಯಾಂಕ್ ಮುಂತಾದ ಕಾರ್ಯಕ್ರಮಗಳನ್ನು ನಿಯಮಿತವಾಗಿ ನಡೆಸಿಕೊಂಡು ಬರುತ್ತಿದೆ.

# ತಿಂಗಳ ವರದಿ
## ( ಮಾರ್ಚ್ - ಏಪ್ರಿಲ್ 2025)

**ಹಸಿರು ಭಾನುವಾರ:** ಅದಮ್ಯ ಚೇತನದ ಹಸಿರು ಭಾನುವಾರದ ಯೋಜನೆಯಡಿ, 482 ರಿಂದ 486ನೇ ಭಾನುವಾರಗಳವರೆಗೆ ವಿವಿಧ ಸ್ಥಳಗಳಲ್ಲಿ ಗಿಡ ನೆಡುವ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಿದವು. 482, 483, 484, 485 ಮತ್ತು 486 ಹಸಿರು ಭಾನುವಾರಗಳನ್ನು ಕ್ರಮವಾಗಿ, ಬೆಂಗಳೂರು ವಿಶ್ವವಿದ್ಯಾಲಯದ ಬಯೋಪಾರ್ಕ್ ಆವರಣ, ಕಾರ್ತಿಕ ಕಲ್ಯಾಣ ಮಂಟಪದ ಆವರಣ, ಲಕ್ಷ್ಮೀಪುರಂ ಮುಖ್ಯರಸ್ತೆಯ ಗಣೇಶ ಉದ್ಯಾನ ಆವರಣ, ಅಕ್ಷಯ ನಗರದ ಹುಳಿಮಾವು ರಸ್ತೆಯಲ್ಲಿರುವ ಬಿಟಿಎಂ ಮೆಡೋಸ್ ಲೇಔಟ್, ಸರ್ಜಾಪುರ- ಆನೇಕಲ್ ರಸ್ತೆಯ ಗೋಣಿಘಟ್ಟಪುರ ಕೆರೆಯ ಆವರಣದಲ್ಲಿ ನಡೆಯಿತು. ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು ಮೊದಲಾದವರು ಭಾಗವಹಿಸಿದ್ದರು.

**ಶ್ರದ್ಧೆಯ ಶಿಲ್ಪ**: ಪ್ರತಿ ಮಂಗಳವಾರ ಮುಂಜಾನೆ 6:35ಕ್ಕೆ ಮತ್ತು ಸಂಜೆ 6:10ಕ್ಕೆ ಮೈಸೂರು ಆಕಾಶವಾಣಿಯಿಂದ ಬಿತ್ತರಗೊಳ್ಳುತ್ತಿರುವ ಶ್ರದ್ಧೆಯಶಿಲ್ಪ ಬಾನುಲಿ ಕಾರ್ಯಕ್ರಮವನ್ನು ಅದಮ್ಯ ಚೇತನ ಸಂಸ್ಥೆಯು ಪ್ರಾಯೋಜಿಸುತ್ತಿದೆ. ಶ್ರೀ ಟಿ. ಎಸ್ ಗೋಪಾಲ್ ಪ್ರಸ್ತುತ ಪಡಿಸುತ್ತಿರುವ ಈ ಕಾರ್ಯಕ್ರಮವು ಆಕಾಶವಾಣಿಯ ಜನಪ್ರಿಯ ಕಾರ್ಯಕ್ರಮವಾಗಿದೆ. ಕರ್ನಾಟಕ ದೇವಾಲಯಗಳನ್ನು ಪರಿಚಯಿಸುವ ಈ ಸರಣಿಯಲ್ಲಿ ಈ ತಿಂಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್ಲಿನ ದೇವಾಲಯ, ಬೆಳಗಾವಿ ಜಿಲ್ಲೆಯ ಹೂಲಿಯ ದೇವಾಲಯ, ತುಮಕೂರು ಜಿಲ್ಲೆಯ ಕೈದಾಳದ ಚೆನ್ನಕೇಶವ ದೇವಾಲಯ, ಕಲಬುರ್ಗಿ ಜಿಲ್ಲೆಯ ಚಿಂಚನಸೂರಿನ ಮಹೇಶ್ವರ ದೇವಾಲಯವನ್ನು ಪರಿಚಯಿಸಲಾಯಿತು.



**ಕೆನರಾ ಬ್ಯಾಂಕ್‌ನಿಂದ ಅದಮ್ಯ ಚೇತನ ಸಂಸ್ಥೆಗೆ ಬಸ್ ಕೊಡುಗೆ:** ಅದಮ್ಯ ಚೇತನ ಸಂಸ್ಥೆಯ ಸಮಾಜಮುಖಿ ಸೇವಾ ಚಟುವಟಿಕೆಗಳಿಗೆ ಮತ್ತಷ್ಟು ಬಲ ನೀಡುವ ನಿಟ್ಟಿನಲ್ಲಿ, ಹೆಮ್ಮೆಯ ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲೊಂದಾದ ಕೆನರಾ ಬ್ಯಾಂಕ್ ತನ್ನ ಸಾಮಾಜಿಕ ಜವಾಬ್ದಾರಿಯ (CSR) ಯೋಜನೆಯಡಿಯಲ್ಲಿ ಒಂದು ಬಸ್ಸನ್ನು ಕೊಡುಗೆಯಾಗಿ ನೀಡಿದೆ. ಈ ಬಸ್ಸನ್ನು 2025ರ ಏಪ್ರಿಲ್ 04ರಂದು, ಬೆಂಗಳೂರು ನಗರದಲ್ಲಿರುವ ಅದಮ್ಯ ಚೇತನ ಸಂಸ್ಥೆಗೆ ಹಸ್ತಾಂತರಿಸಲಾಯಿತು. ಈ ಕೊಡುಗೆಗಾಗಿ ಕೆನರಾ ಬ್ಯಾಂಕಿಗೆ ಅದಮ್ಯ ಚೇತನ ಸಂಸ್ಥೆಯು ಕೃತಜ್ಞತೆ ಸಲ್ಲಿಸುತ್ತಿದೆ.

**ನಿತ್ಯ ಅನ್ನದಾನ :** ಅದಮ್ಯ ಚೇತನದಿಂದ ವತಿಯಿಂದ ನಿತ್ಯ ಅನ್ನದಾನ ಕಾರ್ಯಕ್ರಮವು ನಿರಂತರವಾಗಿ ನಡೆಯುತ್ತಿದ್ದು, ಗವಿಪುರ, ಜಯನಗರ, ಹುಬ್ಬಳ್ಳಿ, ಕಲಬುರಗಿ, ಜೋಧಪುರ ಮೊದಲಾದ ನಮ್ಮ ಎಲ್ಲಾ 8 ಕೇಂದ್ರಗಳಲ್ಲಿಯೂ ಅಗತ್ಯವಿರುವ ಜನರು ರುಚಿಕರವಾದ ಭೋಜನ ಸೌಲಭ್ಯವನ್ನು ಪಡೆಯುತ್ತಿದ್ದಾರೆ.

**ಅಯೋಧ್ಯೆಯಲ್ಲಿ ಅದಮ್ಯ ಚೇತನದ ನಿತ್ಯ ಅನ್ನದಾನ ಸೇವೆ:** ರಾಮನಗರಿ ಅಯೋಧ್ಯೆಯ ಕರಸೇವಕಪುರದಲ್ಲಿ ಅದಮ್ಯ ಚೇತನ ಸಂಸ್ಥೆಯ ನಿತ್ಯ ಅನ್ನದಾನ ಸೇವೆ ಸೀತಾ ರಸೋಯಿ ಅಡುಗೆ ಮನೆಯ ಮೂಲಕ ಭಕ್ತರ ಸೇವೆಗೆ ತೆರೆದಿದೆ. ಪ್ರತಿದಿನ ಸಾವಿರಾರು ಭಕ್ತರಿಗೆ ಉಚಿತವಾಗಿ ಪೌಷ್ಟಿಕ ಹಾಗೂ ಸ್ವಚ್ಛ ಆಹಾರವನ್ನು ನೀಡುವ ಈ ಸೇವೆಯು ಭಕ್ತರಲ್ಲಿ ಸಂತೋಷ ಹುಟ್ಟುಹಾಕಿದ್ದು, ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಅನಂತಪಥ

Published by: Tejaswini Ananthkumar

For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪತ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

# ಅನಂತ ಚಿತ್ರಸಂಪುಟ

**ಪಕ್ಷದ ವಿವಿಧ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಅನಂತಕುಮಾರರು ನುರಿತ ವಕ್ತಾರರೂ ಆಗಿದ್ದರು. ಸ್ಪಷ್ಟವಾದ ನಿರೂಪಣೆ, ಸೂಕ್ತಭಾಷೆಯ ಬಳಕೆ, ಸಂದರ್ಭೋಚಿತ ಮಾತು ಮತ್ತು ಪತ್ರಕರ್ತರೊಡನೆ ಆತ್ಮೀಯ ಸಂಬಂಧ ಇವು ಅವರ ಯಶಸ್ಸಿಗೆ ಕಾರಣಗಳಾಗಿದ್ದವು.**
























# ಅದಮ್ಯ ಸೇವಾ

## ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )




ದಾವಣಗೆರೆಯ ವನಿತಾ ಸಮಾಜ (ರಿ) ದ ಡಾ. ನಾಗಮ್ಮ ಕೇಶವಮೂರ್ತಿ ಸಭಾಂಗಣವನ್ನು ಮಾರ್ಚ್ 26 ರಂದು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಉದ್ಘಾಟಿಸಿದರು




ಮೈಸೂರಿನ ಅಭ್ಯುದಯ ಮಹಿಳಾ ಸಮಾಜ (ರಿ) ಟ್ರಸ್ಟ್ ನ 30ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಿದರು



ಸಾಗರದ ಮಲೆನಾಡು ಅಭಿವೃದ್ಧಿ ಪ್ರತಿಷ್ಠಾನದ ವತಿಯಿಂದ ಲಾಲ್ ಬಹದ್ದೂರ್ ಕಲಾ, ವಿಜ್ಞಾನ ಮತ್ತು ಎಸ್.ಬಿ. ಸೊಲಬಣ್ಣ ಶೆಟ್ಟಿ ವಾಣಿಜ್ಯ ಕಾಲೇಜು ಆವರಣದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಗಿಡ ನೆಟ್ಟರು.



ಅಲ್ಮಾನ್ ಇನ್ ಆಕ್ಷನ್ (AiA 2025) ಕಂಪನಿಯ ಸಿಬ್ಬಂದಿ ವರ್ಗದವರು ತಮ್ಮ ಸಿಎಸ್‌ಆರ್ ನಿಧಿಯ ಅಡಿಯಲ್ಲಿ ಸಂಸ್ಥೆಗೆ ದಿನಸಿ ಸಾಮಗ್ರಿಗಳನ್ನು ದೇಣಿಗೆ ನೀಡಿದರು. ಅಲ್ಲದೆ, ಅವರು ಶೂನ್ಯ ತ್ಯಾಜ್ಯ ಅಡುಗೆ ಮನೆಯನ್ನು ವೀಕ್ಷಿಸಿದರು.



ಅಯೋಧ್ಯೆಯ ಶ್ರೀ ಪ್ರಕಾಶ್, ಶ್ರೀ ಅಜಯ್ ಕುಮಾರ್ ಮತ್ತು ಶ್ರೀ ಅಭಿಷೇಕ್ ಕುಮಾರ್ ಅವರು ಅದಮ್ಯ ಚೇತನದ ಅಡುಗೆ ಮನೆಯನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.



ಸೊರಬ ತಾಲೂಕಿನ ಕುಪ್ಪೆ ಗ್ರಾಮದ ಶ್ರೀ ಸೀತಾರಾಮಾಂಜನೇಯ ವನಕ್ಕೆ ಇತ್ತೀಚೆಗೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಭೇಟಿ ನೀಡಿ, ವೃಕ್ಷಲಕ್ಷ ಆಂದೋಲನದ ಪಶ್ಚಿಮ ಘಟ್ಟದ ಗ್ರಾಮ ನೈಸರ್ಗಿಕ ಭೂಮಿ ಸಂರಕ್ಷಣಾ ಅಭಿಯಾನಕ್ಕೆ ಚಾಲನೆ ನೀಡಿದರು.



ಹುಬ್ಬಳ್ಳಿಯ ರೈಲ್ವೇ ಸ್ಟೇಷನ್ ರಸ್ತೆಯ ಶ್ರೀ ಈಶ್ವರ ದೇವಸ್ಥಾನದ ಆವರಣದಲ್ಲಿ ಅದಮ್ಯ ಚೇತನದಿಂದ ಅನ್ನದಾನ ಸೇವೆ ನಡೆಯುತ್ತಿದೆ.



ಅದಮ್ಯ ಚೇತನದ ಹಸಿರು ಭಾನುವಾರ 485ನೇ ಕಾರ್ಯಕ್ರಮ ಅಕ್ಷಯನಗರದ ಹುಳಿಮಾವು ರಸ್ತೆಯಲ್ಲಿರುವ ಬಿಟಿಎಂ ಮೆಡೋಸ್ ಲೇಔಟ್ ನಲ್ಲಿ ಯಶಸ್ವಿಯಾಗಿ ಜರುಗಿತು.